ವಿಜಯಪುರ | ಸಂಪುಟ 04 | ಸಂಚಿಕೆ 111 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

**Udayarashmi** Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶನಿವಾರ, ಜೂನ್, 20, 2026

"ವಿದಾನಪರಿಷತ್ ಚುನಾವಣೆಯಲ್ಲಿ ಕ್ರಾಸ್ ವೋಟಿಂಗ್‌ನಿಂದಾಗಿ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ತೀವ್ರ ಬೇಸರ ಮತ್ತು ನೋವಾಗಿದೆ. ನಮಗೂ ಕೂಡ ಅಷ್ಟೇ ನೋವುಂಟಾಗಿದೆ. ನಾವಿಬ್ಬರೂ ಈ ರಾಜಕೀಯ ದ್ರೋಹವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದೇವೆ, ನಮ್ಮ ಮೈತ್ರಿ ಅಭ್ಯರ್ಥಿ ಸೋಲುಂಡಿರುವುದು ನಮಗೆ ಅತೀವ ಬೇಸರ ತಂದಿದೆ."



■ ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷರು

## ಜಮೀನುಗಳಿಗೆ ಜಂಟಿ ಕೃಷಿ ನಿರ್ದೇಶಕ, ಸಹಾಯಕ ನಿರ್ದೇಶಕರು ಭೇಟಿ

■ ಉದಯರಶ್ಮಿ ದಿನಪತ್ರಿಕೆ



ಎಚ್.ಡಿ.ಕೋಟೆ: ತಾಲೂಕಿನಾದ್ಯಂತ ಮುಸುಕಿನ ಜೋಳಕ್ಕೆ ಬೂಜುರೋಗ ಅಥವಾ ಬಿಳಿ ಸುಳಿರೋಗ ಕಾಣಿಸಿಕೊಂಡಿದ್ದು ರೈತರು ಆತಂಕಕ್ಕಿಡಾಗಿದ್ದರೆ. ಈ ಹಿನ್ನೆಲೆ ಶುಕ್ರವಾರ ಜಂಟಿ ಕೃಷಿ ನಿರ್ದೇಶಕ ಡಾ. ಕೆ.ಹೆಚ್ ರವಿ, ಸಹಾಯಕ ಕೃಷಿ ನಿರ್ದೇಶಕ ಪ್ರಸಾದ್ ಅವರು ಹಂಪಾಪುರ ಹೋಬಳಿಯ ನಾಯಕನಹುಂಡಿ, ಕರಿಗಾಳ, ಕೋಳಗಾಲ, ಮಾದಾಪುರ, ಹ್ಯಾಂಡ್ ಪೋಸ್ಟ್ ಯರಹಳ್ಳಿ ಗ್ರಾಮದ ರೈತರ ಜಮೀನುಗಳಿಗೆ ಭೇಟಿ ನೀಡಿ ರೋಗದ ತಾಕುಗಳನ್ನು ಪರಿಶೀಲನೆ ನಡೆಸಿದರು. ರೋಗ ಬರಲು ಕಾರಣವೇನು? ರೋಗ ನಿಯಂತ್ರಣಕ್ಕೆ ರೈತರು ಏನೆಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು? ಮುಸುಕಿನ ಜೋಳ ಬಿತ್ತನೆಗೂ ಮುನ್ನ ಏನು ಮಾಡಬೇಕು, ತದನಂತರ ಯಾವ ಔಷಧಿ ಸಿಂಪಡಿಸಬೇಕು, ಮಣ್ಣಿನ ಫಲವತ್ತತೆಗೆ ಬೇರೆ ಯಾವ ಬೆಳೆಗಳನ್ನು ಬೆಳೆಯಬೇಕು ಎಂಬುದರ ಕುರಿತು ರೈತ-ರಿಗೆ ಮಾಹಿತಿ ಮತ್ತು ಸಲಹೆ ನೀಡಿದರು.

ಜಂಟಿ ಕೃಷಿ ನಿರ್ದೇಶಕರಾದ ಡಾ.ಕೆ ಹೆಚ್ ರವಿ ಮಾತನಾಡಿ, ವರ್ಷಕ್ಕೆ ಎರಡು-ಮೂರು ಬಾರಿ ಮುಸುಕಿನ ಜೋಳವನ್ನು ನಿರಂತರವಾಗಿ ಬೆಳೆಯುವುದ-ರಿಂದ ರೋಗ ಉಲ್ಬಣಗೊಳ್ಳುತ್ತಿದೆ. ಮುಸುಕಿನ ಜೋಳದ ಬದಲಾಗಿ ರಾಗಿ, ಸೋಯಾ ಅವರೆ, ಅಲಸಂದೆ ಮತ್ತು ತೊಗರಿ ಬೆಳೆಗಳೊಂದಿಗೆ ಬೆಳೆ ಪರಿವರ್ತನೆ ಮಾಡಬೇಕು. ಮೇವಿನ ಉದ್ದೇಶಕ್ಕಾಗಿ (ಸೈಲೇಜ್) ಒಂದೇ ತಾಕಿನಲ್ಲಿ ವರ್ಷಕ್ಕೆ ಎರಡು-ಮೂರು ಬಾರಿ ಯಾವುದೇ ಬೀಜೋಪಚಾರ ಮಾಡದೆ ಹಾಗೂ ಪೊಟಾಶ್ ಮತ್ತು ಜಿಂಕ್ ಸಲ್ಫೇಟ್ ಗೊಬ್ಬರ ಬಳಸದೇ ಸಾರಜನಕ ಹೆಚ್ಚಿರುವ ಗೊಬ್ಬರಗಳನ್ನು ಬಳಕೆ ಮಾಡಿರುವುದರಿಂದ ಈ ರೋಗವು ಉಲ್ಬಣವಾಗಿದೆ. ಹಾಗಾಗಿ ಕೃಷಿ ವಿಜ್ಞಾನಿಗಳು ಶಿಫಾರಸ್ಸು ಮಾಡಿರುವ ಔಷಧವನ್ನು ಸಿಂಪಡಿಸುವುದರ ಜೊತೆಗೆ ಬೆಳೆ ಪರಿವರ್ತನೆ ಮಾಡಬೇಕೆಂದು ಸಲಹೆ ನೀಡಿದರು.

ಈ ವೇಳೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಪ್ರಸಾದ್, ಅಧಿಕಾರಿಗಳಾದ ಸಿದ್ದಪ್ಪಸ್ವಾಮಿ, ಪ್ರವೀಣ್, ಆತ್ಮ ಯೋಜನೆ ಸಿಬ್ಬಂದಿಗಳಾದ ರಕ್ಷಿತಾ, ವಿನಯ್ ಸೇರಿದಂತೆ ರೈತರು ಉಪಸ್ಥಿತರಿದ್ದರು.

## ರೇವಣಸಿದ್ದೇಶ್ವರ ಏತ ನೀರಾವರಿ ಪ್ರಗತಿ ಪರಿಶೀಲನಾ ಸಭೆ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮುಖ್ಯ ಕಚೇರಿ ಬೆಂಗಳೂರಿನ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯಲ್ಲಿ ಹೊರ್ತಿ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆ ಹಾಗೂ ತಿಡಗುಂದಿ ವಿಸ್ತರಣ ಕಾಲುವೆ ಕಾಮಗಾ-ರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಸಭೆಯಲ್ಲಿ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲರು ಭಾಗವಹಿಸಿ ಯೋಜನೆಗಳ ಅನುಷ್ಠಾನದ ಪ್ರಗತಿ ಕುರಿತು ಅಧಿಕಾ-ರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ಸಭೆಯಲ್ಲಿ ಕಾಮಗಾರಿಗಳ ಗುಣಮಟ್ಟ ಕಾರ್ಯಗತಗೊಳಿಸುವ ವೇಗ ರೈತರಿಗೆ ದೊರೆಯಲಿರುವ ಪ್ರಯೋಜನಗಳು ಹಾಗೂ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸಲು ಕೈಕೊಳ್ಳಬೇಕಾದ ಕ್ರಮಗಳ ಕುರಿತು ಸಮಗ್ರವಾಗಿ ಪರಿಶೀಲಿಸಲಾಯಿತು. ನೀರಾವರಿ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ರೈತರ ಹೊಲಗಳಿಗೆ ತಲುಪಿಸುವ ನಿಟ್ಟಿನಲ್ಲಿ ಯಾವದೇ ನಿರ್ಲಕ್ಷ್ಯ ವಹಿಸದೇ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಶಾಸಕ ಯಶವಂತರಾಯಗೌಡರು ಸೂಚನೆ ನೀಡಿದರು.

ಹೋರ್ತಿ ರೇವನಸಿದ್ದೇಶ್ವರ ಯೋಜನೆ ಹಾಗೂ ತಿಡಗುಂದಿ ವಿಸ್ತರಣಾ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಲ್ಲಿ ಇಂಡಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳ ರೈತರಿಗೆ ಮಹತ್ತರ ಅನುಕೂಲವಾಗಲಿದ್ದು ಕೃಷಿ ಉತ್ಪಾದನೆ ಹೆಚ್ಚಳದೊಂದಿಗೆ ರೈತರ ಆರ್ಥಿಕ ಸ್ಥಿತಿ ಸುಧಾರಣೆಗೆ ಸಹಕಾರಿಯಾಗಲಿದೆ ಎಂದು ಶಾಸಕರು ತಿಳಿಸಿದರು. ಈ ಯೋಜನೆಗಳು ಪ್ರದೇಶದ ಸಮಗ್ರ ಅಭಿವೃದ್ದಿಗೆ ಹೊಸ ದಿಕ್ಕು ನೀಡಲಿವೆ ಎಂಬ ವಿಶ್ವಾಸವನ್ನು ವ್ಯಕ್ತ ಪಡಿಸಿದರು.

ಕೆಬಿಜೆಎನ್ ಎಲ್ ವ್ಯವಸ್ಥಾಪಕ ನಿರ್ದೇಶಕ ಕೃಷ್ಣಮೂರ್ತಿ ಕುಲಕರ್ಣೀ, ಆಲಮಟ್ಟಿ ಮುಖ್ಯ ಅಭಿಯಂತರ ಬಸವರಾಜ, ಅಧಿಕ್ಷಕ ಅಭಿಯಂತರ ಗೋವಿಂದ ರಾಠೋಡ, ಮತ್ತಿತರಿದ್ದರು.

## ಕಟ್ಟುಕಥೆ ಸೃಷ್ಟಿಸಿ ದೂರು ನೀಡಿದ ಮೂವರ ಬಂಧನ : ಕಂಟ್ರಿಪಿಸ್ತೂಲ್ ವಶ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ತನ್ನ ಮೇಲೆ ಫೈರಿಂಗ್ ಮಾಡಲಾಗಿದೆ ಎಂದು ಕಟ್ಟುಕಥೆ ಸೃಷ್ಟಿಸಿ ಕೆಲವರ ಮೇಲೆ ಕಳೆದ ಜೂ.03 ರಂದು ನಗರದ ಗ್ರಾಮೀಣ ಪೊಲೀಸ ಠಾಣೆಯಲ್ಲಿ ದೂರು ದಾಖಲಿಸಿದ್ದ ವ್ಯಕ್ತಿ ಸೇ-ರಿದಂತೆ ಮೂವರನ್ನು ಗುರುವಾರ ಬಂಧಿಸಿದ ಪೋಲೀಸರು ಅವ-ರಿಂದ ಕೃತ್ಯಕ್ಕೆ ಬಳಸಿದ ಕಂಟ್ರೀ ಪಿಸ್ತೂಲ್‌ವನ್ನುವಶಪಡಿಸಿಕೊಂಡ ಘಟನೆ ನಡೆದಿದೆ.

ಪಿರ್ಯಾಧಿದಾರ ದಯವಂತ ತಂ. ಸಾಯಪ್ಪ ಡೇರೆ (30) ಸಾ: ಇಟ್ಟಂಗಿಹಾಳ ದೊಡ್ಡಿ ಸೇರಿದಂತೆ ಆನಂದ @ ಅನೀಲ ತಂ. ಮಾಯಪ್ಪ ಡೇರಿ (26) ಸಾ: ಇಟ್ಟಂಗಿಹಾಳ ದೊಡ್ಡಿ ಮತ್ತು ಕೊಂಡಿಬಾ ತಂ. ಭೀರಪ್ಪ ಮಾನವರ (23) ಸಾ: ಇಟ್ಟಂಗಿಹಾಳ ದೊಡ್ಡಿ ಬಂಧಿತರು.

ಕಳೆದ ಜೂ.3 ರಂದು ದಯವಂತ ತಂ. ಸಾಯಪ್ಪ ಡೇರೆ ಈತನು ದೂರನ್ನು ನೀಡಿದ್ದು, ಅದರಲ್ಲಿ ದಿನಾಂಕ: 03-06-2026 ರಂದು ತೊರವಿ ಗ್ರಾಮದ ಹದ್ದಿಯಲ್ಲಿ ಬರುವ ತನ್ನ ಜಮೀನದಲ್ಲಿ ಇದ್ದಾಗ ಮದ್ಯಾಹ್ನ 3.00 ಗಂಟೆ ಸುಮಾರಿಗೆ ಯಾರೋ ಇಬ್ಬರೂ ಅಪರಿಚಿತ ವ್ಯಕ್ತಿಗಳು ತಮ್ಮ ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಕಾಲ್ನಡಿಗೆಯಲ್ಲಿ ಬಂದು ತನ್ನ ಹಿಂದಿನಿಂದ ಫೈ-ರಿಂಗ್ ಮಾಡಿ ತನ್ನ ಬಲರಟ್ಟೆಗೆ ಗಾಯಗೊಳಿಸಿದ ಬಗ್ಗೆ ಹೇಳಿ, ಈ ಘಟನೆಗೆ ಒಟ್ಟು 06 ಜನರ ಮೇಲೆ ದೂರನ್ನು ಸಲ್ಲಿಸಿದ್ದನು.

ಈ ಪ್ರಕರಣದ ತನಿಖೆಯನ್ನು ಟಿ. ಎಸ್. ಸುಲ್ಪಿ, ಡಿಎಸ್‌ಪಿ ವಿಜಯಪುರ ಗ್ರಾಮೀಣ, ಆರ್. ಎಸ್. ಜಾನರ, ಪಿಐ ವಿಜಯಪುರ ಗ್ರಾಮೀಣ ಠಾಣೆ, ವಿನೋದ ದೊಡಮನಿ, ಪಿಎಸ್‌ಐ ಗ್ರಾಮೀಣ ಠಾಣೆ ಹಾಗೂ ಸಿಬ್ಬಂದಿ ಜನರನ್ನೊಳಗೊಂಡ ತನಿಖಾ ತಂಡವನ್ನು ರಚನೆ ಮಾಡಿ ತನಿಖೆಗೆ ವಹಿಸಲಾಗಿತ್ತು.

ತನಿಖೆ ವೇಳೆ ದೂರುದಾರನು ಮೂಲ ಎಫ್‌ಐಆರ್‌ದಲ್ಲಿ ನಮೂದಿಸಿದ ಆರೋಪಿತರೊಂದಿಗೆ ಊರಲ್ಲಿ ವೈಮನಸ್ಸುಗಳು ಇದ್ದು, ಇದೇ ಕಾರಣದಿಂದ ಏನಾದರೂ ಘಟನೆ ಸೃಷ್ಟಿಸಿ ಅವರ ಮೇಲೆ ಪ್ರಕರಣ ದಾಖಲಿಸಬೇಕು ಅನ್ನುವ ದುರುದ್ದೇಶವನ್ನು ಹೊಂದಿ 03 ಜನರು ಜಾಲಗೇರಿ ಗ್ರಾಮದ ಆರೋಪಿ ಆನಂದ @ ಅನೀಲ ಡೇರಿ ಈತನ ಹೊಲದಲ್ಲಿ ಸೇರಿ ಅಲ್ಲಿ ಆರೋಪಿ ಆನಂದ ಈತನು ತನ್ನ ಹತ್ತಿರ ಇದ್ದ ಕಂಟ್ರೀ ಪಿಸ್ತೂಲ್‌ದಿಂದ ಪಿರ್ಯಾಧಿ ದಯವಂತ ಡೇರೆ ಈತನ ಬಲಗೈ ರಟ್ಟೆಯ ಹತ್ತಿರ ಗುಂಡು ಹಾರಿಸಿ ಗಾಯಗೊಳಿಸಿದ್ದು, ನಂತರ ಗಾಯಾಳು ದಯವಂತನು ತೊರವಿ ಗ್ರಾಮದಲ್ಲಿ ತನಗೆ ಎಫ್‌ಐಆರ್‌ದಲ್ಲಿ ನಮೂದಿಸಿದ ಆರೋಪಿತರು ಫೈರಿಂಗ್ ಮಾಡಿ ಗಾಯಗೊಳಿಸಿರುತ್ತಾರೆ ಅಂತಾ ಸುಳ್ಳು ಘಟನಾ ಸ್ಥಳವನ್ನು ಸೃಷ್ಟಿಸಿ, ಪಿರ್ಯಾಧಿ ನೀಡಿದ್ದನು.

ಪ್ರಕರಣ ವಿಜಯಪುರ ಗ್ರಾಮೀಣ ಪೊಲೀಸ ಠಾಣೆಯಲ್ಲಿ ದಾಖಲಾಗಿದ್ದು ತನಿಖಾ ತಂಡದ ಅಧಿಕಾರಿಗಳನ್ನು ಎಸ್ಪಿ ಲಕ್ಷ್ಮಣ ನಿಂಬರಗಿ ಅಭಿನಂದಿಸಿದ್ದಾರೆ.

# ಅಡ್ಡ ಮತದಾನ: ಬಿಜೆಪಿಯಿಂದ ಸತ್ಯಶೋಧನಾ ಸಮಿತಿ ರಚನೆ

### ವಿಧಾನಪರಿಷತ್ ಚುನಾವಣೆ: ಹೈಕಮಾಂಡ್ ನಾಯಕರು ರಾಜ್ಯಬಿಜೆಪಿ ನಾಯಕರ ಮೇಲೆ ಗರಂ | ವರದಿ ನೀಡುವಂತೆ ಸೂಚನೆ

ಬೆಂಗಳೂರು: ಗುರುವಾರ ನಡೆದ ಕರ್ನಾಟಕ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯಿಂದ ಅಡ್ಡ ಮತದಾನ ನಡೆದಿದ್ದಕ್ಕೆ ಹೈಕಮಾಂಡ್ ನಾಯಕರು ರಾಜ್ಯಬಿಜೆಪಿ ನಾಯಕರ ಮೇಲೆ ಗರಂ ಆಗಿದ್ದು ವರದಿ ನೀಡುವಂತೆ ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.

ಬಿಜೆಪಿ ಜೆಡಿಎಸ್ ಶಾಸಕರ ಅಡ್ಡ ಮತದಾನ ಮಾಡಿದ ಪರಿಣಾಮ ಕಾಂಗ್ರೆಸ್‌ಗೆ ಹೆಚ್ಚುವರಿಯಾಗಿ 11 ಮತಗಳು ಬಂದಿದ್ದು ಮೈತ್ರಿಗೆ ಸೋಲು ಮತ್ತು ತೀವ್ರ ಮುಜುಗರ ಉಂಟಾಗಿದೆ.ಇದು ಮುಂದಿನ ದಿನಗಳಲ್ಲಿ ಮೈತ್ರಿ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಲಾಗುತ್ತಿದ್ದು, ಬಿಜೆಪಿ ಅಡ್ಡ ಮತದಾನ ಮಾಡಿದ್ದಕ್ಕೆ ರಾಜ್ಯ ನಾಯಕರ ಮೇಲೆ ಹೈಕಮಾಂಡ್ ಕೆಂಡಾಮಂಡಲವಾಗಿದ್ದು ವರದಿ ನೀಡುವಂತೆ ಸೂಚಿಸಿದೆ.

ಸಮಿತಿ ರಚನೆ

ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನವನ್ನು ಗಂಭೀರವಾಗಿ ಪರಿಗಣಿಸಿರುವ ಬಿಜೆಪಿ, ಇದರ ತನಿಖೆಗಾಗಿ ಹಾಗೂ ತಪ್ಪಿತಸ್ಥರನ್ನು ಗುರುತಿಸಲು ಸಿ.ಟಿ. ರವಿ, ಎನ್. ಮಹೇಶ್ ಮತ್ತು ಮಹೇಶ್ ಟೆಂಗಿನಕಾಯಿ ಅವರನ್ನೊಳಗೊಂಡ ವಿಶೇಷ ತಂಡವನ್ನು ರಚಿಸಿದೆ.

ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಶಾಸಕರು ಅಡ್ಡ ಮತದಾನ ಮಾಡಿರುವುದು ಪಕ್ಷಕ್ಕೆ ದೊಡ್ಡ ಹಿನ್ನಡೆಯನ್ನುಂಟುಮಾಡಿದೆ. ಪಕ್ಷದ ನಿರೀಕ್ಷೆಯಂತೆ ಮತಗಳು ಬೀಳದೆ, 4 ರಿಂದ 5 ಬಿಜೆಪಿ ಶಾಸಕರು ಮತ್ತು 6 ರಿಂದ 7 ಜೆಡಿಎಸ್ ಶಾಸಕರು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಚಲಾಯಿಸಿದ್ದಾರೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.





"ನಮ್ಮಿಂದ ಮೂರು ಮತ ಕ್ರಾಸ್ ಆಗಿರೋದು ನಮಗೆ ಖಚಿತ ಆಗಿದೆ. ಅವರ ವಿರುದ್ಧ ಶಿಸ್ತು ಕ್ರಮ ಆಗುತ್ತೆ. ಯಾರು ಕ್ರಾಸ್ ವೋಟು ಹಾಕಿದ್ದಾರೆ ಅಂತ ಚರ್ಚೆ ಮಾಡ್ತೇವೆ. ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡ್ತೇವೆ. ಆಗ ಯಾರು ಅಡ್ಡಮತದಾನ ಮಾಡಿದ್ದಾರೆ ಅಂತ ಗೊತ್ತಾಗುತ್ತದೆ. ಈ ಫಲಿತಾಂಶಕ್ಕೂ ನಮ್ಮಲ್ಲಿ ಸ್ಥಾನಗಳ ಬದಲಾವಣೆ ಆಗುವುದಕ್ಕೂ ಸಂಬಂಧ ಇಲ್ಲ. ಕಾಂಗ್ರೆಸ್ ಪರ ಅಡ್ಡ ಮತದಾನ ಮಾಡಿದ ಬಿಜೆಪಿ ಶಾಸಕರನ್ನು ಪತ್ತೆ ಮಾಡಿ ಶಿಸ್ತುಕ್ರಮ ಜರುಗಿಸಲಾಗುತ್ತದೆ."

■ ಆರ್ ಅಶೋಕ್
ವಿಪಕ್ಷ ನಾಯಕ

### ಹೈಕಮಾಂಡ್ ಗೆ ವರದಿ

ಈ ಅಡ್ಡ ಮತದಾನದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಯಾರ್ಯಾರು ಪಕ್ಷದ ಆದೇಶ ಉಲ್ಲಂಘಿಸಿದ್ದಾರೆ ಎಂಬ ಬಗ್ಗೆ ವರದಿ ನೀಡಲು ಹಿರಿಯ ನಾಯಕರ ತಂಡವನ್ನು ರಚಿಸಲಾಗಿದೆ. ರಾಜ್ಯ ನಾಯಕರು ಈ ಅಡ್ಡ ಮತದಾನದ ವಿಷಯದ ಬಗ್ಗೆ ದೆಹಲಿಗೆ ತೆರಳಿ ಬಿಜೆಪಿ ಹೈಕಮಾಂಡ್‌ಗೆ ಸಮಗ್ರ ವರದಿಯನ್ನು ಸಲ್ಲಿಸಲಿದ್ದಾರೆ.

## ವಿದ್ಯುತ್ ವಿತರಣಾ ಕೇಂದ್ರಗಳನ್ನು ಖಾಸಗಿ ಕಂಪನಿಗಳಿಗೆ ಹಸ್ತಾಂತರಕ್ಕೆ ವಿರೋಧಿಸಿ ಮನವಿ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಸರ್ಕಾರದ ಆಧೀನದಲ್ಲಿರುವ ವಿದ್ಯುತ್ ವಿತರಣಾ ಕೇಂದ್ರಗಳನ್ನು ಯಾವುದೇ ಕಾರಣಕ್ಕೂ ಖಾಸಗಿ ಕಂಪನಿಗಳಿಗೆ ಹಸ್ತಾಂತರ ಮಾಡದಂತೆ ಆಗ್ರಹಿಸಿ ರಾಷ್ಟ್ರೀಯ ರೈತ ಸಂಘದ ಪದಾಧಿಕಾರಿಗಳು ಹೆಸ್ಕಾಂ ಎಇಇ ಸತೀಶ ಸುಲಾಖೆ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಹೆಸ್ಕಾಂ ಕಚೇರಿಗೆ ಆಗಮಿಸಿದ ರೈತ ಸಂಘದ ಪದಾಧಿಕಾರಿಗಳು ವಿದ್ಯುತ್ ವಿತರಣಾ ಕೇಂದ್ರಗಳ ಮಾರಾಟಕ್ಕೆ ಆಕ್ಷೇಪಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ರೈತ ಸಂಘದ ರಾಜ್ಯ ಮಹಿಳಾ ಕಾರ್ಯದರ್ಶಿ ರೇಣುಕಾ ಪಾಟೀಲ ಮಾತನಾಡಿ, ಸರ್ಕಾರದ ಆಧೀನದಲ್ಲಿನ ವಿದ್ಯುತ್ ಕೇಂದ್ರಗಳನ್ನು ರೈತರ ಹಾಗೂ ಜನಸಾಮಾನ್ಯರ ಹಿತ ಕಡೆಗಣಿಸಿ ಟಾಟಾ ಪವರ್ ಕಂಪನಿಗೆ ಮಾರಾಟ ಮಾಡುವ ಕ್ರಮ ಖಂಡನೀಯ. ವಿದ್ಯುತ್ ಖಾಸಗೀಕರಣ ರೈತ ವಿರೋಧಿ ನೀತಿಯಾಗಿದೆ. ಖಾಸಗೀಕರಣದಿಂದ ಕೃಷಿ ಹಾಗೂ ರೈತ ಸಮುದಾಯಕ್ಕೆ ತುಂಬಲಾರದ ನಷ್ಟ. ಈಗಾಗಲೇ ಕೃಷಿ ಉತ್ಪನ್ನಗಳ ಉತ್ಪಾದನೆ ಕುಂಠಿತಗೊಂಡಿದೆ. ಈ ಸಮಯದಲ್ಲಿ ವಿದ್ಯುತ್ ವಿತರಣೆ ಖಾಸಗಿಯವರ ಪಾಲಾದರೆ ಕೃಷಿ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿ ರೈತರ ಬಾಳು ಹಾಳಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದ್ದರಿಂದ ಸರ್ಕಾರ ಈಗ ಇರುವ ಯಥಾಸ್ಥಿತಿಯನ್ನು ಕಾಯ್ದುಕೊಂಡು ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು ಹಾಗೂ ವಿದ್ಯುತ್ ಖಾಸಗೀಕರಣ ಕಾಯ್ದೆಯನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ತಾಲ್ಲೂಕು ಅಧ್ಯಕ್ಷ ಶಿವಪ್ಪ ಡೋಣೂರ, ಉಪಾಧ್ಯಕ್ಷ ಅಮೀನಪ್ಪಗೌಡ ಬಿರಾದಾರ, ಯುವಮೋರ್ಚಾ ಅಧ್ಯಕ್ಷ ಸಂಗಮೇಶ ಹುಣಸಗಿ, ನಾನಾಗೌಡ ಬೋರಾವತ್, ಸುಭಾಸ್ ಸಜ್ಜನ(ಕೋರವಾರ), ವಿಠ್ಠಲ ಯಾತಗಿರಿ, ಭೀಮನಗೌಡ ಬಿರಾದಾರ(ಹರನಾಳ), ಹಣಮಂತ್ರಾಯಗೌಡ ಪಾಟೀಲ, ಬಂದಗೀಸಾಬ್ ನದಾಫ್, ಬಸನಗೌಡ ಪಾಟೀಲ, ಚಿದಾನಂದ ಮೋಪಗಾರ, ರಾಜಶೇಖರ ಯಾತಗಿರಿ, ಶ್ರೀಮಂತ ರಾಠೋಡ, ಪರಶುರಾಮ ಜಾಧವ ಇದ್ದರು.

## ಆಲಮಟ್ಟಿ ನೀರಿನ ಹಕ್ಕಿಗಾಗಿ ಹೋರಾಟ ತೀವ್ರ :ಸಂಸದರಿಗೆ ಮನವಿ

■ ಉದಯರಶ್ಮಿ ದಿನಪತ್ರಿಕೆ



"ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿ, ವಿಜಯಪುರ" ವತಿಯಿಂದ ಶುಕ್ರವಾರ ಬಾಗಲಕೋಟೆ ಲೋಕಸಭಾ ಕ್ಷೇತ್ರದ ಸಂಸದರಾದ ಪಿ.ಸಿ. ಗದ್ದಿಗೌಡರ ಅವರನ್ನು ಭೇಟಿ ಮಾಡಿ, ಆಲಮಟ್ಟಿ ಅಣೆಕಟ್ಟಿನಲ್ಲಿ 524.256 ಮೀಟರ್ ಮಟ್ಟದವರೆಗೆ ನೀರಿನ ಸಂಗ್ರಹ ಹಾಗೂ ಬಳಕೆಗೆ ಸಂಬಂಧಿಸಿದಂತೆ ಮಹತ್ವದ ಮನವಿಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿ ಮುಖಂಡರು, "ಆಲಮಟ್ಟಿ ಆಣೆಕಟ್ಟಿನ ನೀರಿನ ಸಂಗ್ರಹ ಹಾಗೂ ನೀರಿನ ಬಳಕೆಯ ಹಕ್ಕು ಕೇವಲ ಒಂದು ಜಿಲ್ಲೆಯ ಬೇಡಿಕೆಯಲ್ಲ, ಇದು ಇಡೀ ಕೃಷ್ಣಾ ಕೊಳ್ಳ ಪ್ರದೇಶದ ರೈತರು, ಯುವಕರು, ಮಹಿಳೆಯರು ಮತ್ತು ಜನಸಾಮಾನ್ಯರ ಬದುಕಿನ ಪ್ರಶ್ನೆಯಾಗಿದೆ. ನೀರಿನ ನ್ಯಾಯಯುತ ಹಂಚಿಕೆ ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯಲಿದೆ" ಎಂದು ತಿಳಿಸಿದರು.

"ನೀರು ನಮ್ಮ ಹಕ್ಕು ▯ ಆಲಮಟ್ಟಿ ಅಣೆಕಟ್ಟಿನಲ್ಲಿ 524.256 ಮೀ. ವರೆಗೆ ನೀರಿನ ಸಂಗ್ರಹ ಹಾಗೂ ಬಳಕೆ ನಮ್ಮ ಗುರಿ" ಎಂಬ ಘೋಷಣೆಯೊಂದಿಗೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಸಮಿತಿಯವರು ತಿಳಿಸಿದರು.

ಈ ಸಂದರ್ಭದಲ್ಲಿ ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿಯ ಸದಸ್ಯರಾದ ಜಮಖಂಡಿ ಮಾಜಿ ಶಾಸಕರು ಶ್ರೀಕಾಂತ್ ಕುಲಕರ್ಣಿ, ಎಸ್.ವಿ.ಪಾಟೀಲ್, ಪಂಚಪ್ಪ ಕಲಬುರ್ಗಿ, ಅರವಿಂದ್ ಕುಲಕರ್ಣಿ, ಬಿ. ಭಗವಾನ್ ರೆಡ್ಡಿ, ಲಲಿತಾ ಬಿಜ್ಜರಗಿ, ಸುರೇಶ್ ಬಿಜಾಪುರ, ಸಿದ್ದಲಿಂಗ ಬಾಗೇವಾಡಿ, ಭೋಗೇಶ್ ಸೋಲಾಪುರ್ ಹಾಗೂ ಗುರುರಾಜ್ ಪಡಶೆಟ್ಟಿ ಉಪಸ್ಥಿತರಿದ್ದರು.

# ಶಾಲಾ ಮಕ್ಕಳಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು

**ನಾವು - ನಮ್ಮವರು**

**(ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಕುರಿತ ಲೇಖನ ಮಾಲಿಕೆ)ಶಾಲಾ ಮಕ್ಕಳಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು**

■ ಉದಯರಶ್ಮಿ ದಿನಪತ್ರಿಕೆ

ಶಾಲೆಯಲ್ಲಿ ಮಕ್ಕಳಿಗೆ ಎ ಎಂದರೆ ಆಪಲ್ ಬಿ ಎಂದರೆ ಬಾಲ್ ಸಿ ಎಂದರೆ ಕ್ಯಾಟ್ ಎಂದು ಮಾತ್ರ ಹೇಳಿಕೊಡುತ್ತಾರೆ. ಆದರೆ ಮನೆಯಲ್ಲಿ ಹೇಗೆ ಎಂದರೆ ಆಪಲ್ ಬಾಲ್ ಎಂಬುದರ ಬದಲಾಗಿ ಪರ್ಯಾಯ ಪದಗಳನ್ನು ನಾವು ಮಕ್ಕಳಿಗೆ ಕಲಿಸಬಹುದು.

ಶಾಲೆಯಲ್ಲಿ ಮಕ್ಕಳಿಗೆ ಎ ಎಂದರೆ ಆಪಲ್ ಬಿ ಎಂದರೆ ಬಾಲ್ ಎಂದು ಹೇಳುವುದರ ಬದಲು ಮನೆಯಲ್ಲಿ ಕಾಣಿಸಿರುವ ಎ ಬಿ ಸಿ ಡಿ ಹೀಗೆ ಹತ್ತು ಹಲವು ಅಕ್ಷರಗಳಿಗೆ ಪರ್ಯಾಯವಾಗಿ ಬೇರೆ ಪದಗಳನ್ನು, ವಿಷಯಗಳನ್ನು ಕಲಿಸುತ್ತಾ ಹೋದಾಗ ಮಕ್ಕಳಲ್ಲಿ ಹೆಚ್ಚಿನ ವಿಷಯ ಸಂಗ್ರಹಣೆಯಾಗುತ್ತದೆ.

ಇನ್ನು ಇದಕ್ಕೆ ಹೊರತಾಗಿ ಮಕ್ಕಳು ಶಾಲೆಯಲ್ಲಿ ಕಲಿಯುವ ವೈಜ್ಞಾನಿಕ ವಿಷಯಗಳನ್ನು ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಅನುಭವಿಸುವ ಮೂಲಕ ಕಲಿಯಲು ಅವಕಾಶ ಮಾಡಿಕೊಡಬೇಕು.

ರೈತ ಹೊಲವನ್ನು ಉತ್ತಿ ಹದ ಮಾಡುತ್ತಾನೆ. ಬೀಜವನ್ನು ಬಿತ್ತುತ್ತಾನೆ ಹಾಗೆ ಬಿತ್ತಿದ ಬೀಜ ಮೊಳಕೆ ಒಡೆದು ಪುಟ್ಟ ಸಸಿಯಾಗಿ ಕ್ರಮೇಣ ನೀರು ಬಿಸಿಲಿನ ಸಹವಾಸದಲ್ಲಿ ಎತ್ತರವಾಗಿ ಬೆಳೆದು ತೆನೆ ಮೂಡಿ ಆ ತೆನೆಯ ಭಾರದಿಂದ ತೂಗುತ್ತದೆ. ಜೋಳ, ಗೋಧಿ, ಅಕ್ಕಿ ಎಲ್ಲಿಂದ ಬರುತ್ತವೆ ಎಂದು ನಾವು ಮಕ್ಕಳನ್ನು ಕೇಳಿದಾಗ ಅವರ ಬಾಯಿಂದ ಮಾರುಕಟ್ಟೆಯಿಂದ ಎಂಬ ಉತ್ತರ ಬರುತ್ತದೆ. ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ನಾವು ನಮ್ಮ ಮಕ್ಕಳಿಗೆ ಯಾವುದೇ ರೀತಿಯ ಕೃಷಿ ವಿಷಯಗಳು ಅರಿವನ್ನು ಮೂಡಿಸಿಲ್ಲ. ಇದಕ್ಕೆ ನಾವು ಹೆಚ್ಚಿನ ಖರ್ಚು ಮಾಡಬೇಕಾಗಿಲ್ಲ. ಹತ್ತಿರದ ಊರಿನ ಹೊಲಗಳಲ್ಲಿ ಬಿತ್ತುವ, ಬೆಳೆಯುವ, ತೆನೆ ಮುರಿಯುವ, ರಾಶಿ ಮಾಡುವ ಅವುಗಳನ್ನು ಮಾರುಕಟ್ಟೆಗೆ ಒಯ್ದು ಮಾರುವ ಸಮಯದಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಿ ವಿಷಯವನ್ನು ವಿವರಿಸಿದರೆ ಅವರಿಗೂ ಕೂಡ ತಮ್ಮ ತಟ್ಟೆಯಲ್ಲಿ ಬಂದು ಬೀಳುವ ಮುನ್ನ ಆಹಾರ ಬೆಳೆಯಲು ಅದೆಷ್ಟು ಕಷ್ಟ ಪಡಬೇಕು ಎಂಬುದರ ಅರಿವು ಮೂಡುತ್ತದೆ. ಜೊತೆಗೆ ರೈತನ ಕುರಿತಾದ ಕೃತಜ್ಞತಾ ಭಾವ ಕೂಡ.

ವೈಜ್ಞಾನಿಕವಾಗಿ ಮಣ್ಣು, ನೀರು, ಗಾಳಿ, ಬೆಳಕು, ಭೌಗೋಳಿಕ





ಮತ್ತು ಪ್ರಾಕೃತಿಕ ವಾತಾವರಣಗಳನ್ನು ಶಾಲೆಯ ಪಠ್ಯದಲ್ಲಿ ಓದುವ ಮಕ್ಕಳು ಪ್ರಾಯೋಗಿಕವಾಗಿ ಅವುಗಳನ್ನು ನೋಡುವ, ಅನುಭವಿಸುವ, ವಿವರಗಳನ್ನು ಅರಿಯುವ ಪ್ರಕೃತಿಯಿಂದ ನಾವು ಮಕ್ಕಳನ್ನು ವಂಚಿತರನ್ನಾಗಿಸುತ್ತೇವೆ.

ನಮ್ಮ ಹತ್ತಿರದ ವಿಜ್ಞಾನ ಭವನ, ಕಲಾ ಮತ್ತು ಸಾಂಸ್ಕೃತಿಕ ಭವನಗಳಿಗೆ ಭೇಟಿ ಕೊಡುವುದು ಮಕ್ಕಳಿಗೆ ಮನೆಯ ಹೊರಗಿನ ಪರಿಸರದ ಕುರಿತ ಜ್ಞಾನವನ್ನು ನೀಡುವುದು ನಾವು ಮಾಡಲೇಬೇಕಾದ ಕರ್ತವ್ಯಗಳು. ಯಾವ ವಿಷಯಗಳನ್ನು ನಾವು ಶಾಲೆಯ ಪಠ್ಯ ಚಟುವಟಿಕೆಗಳಲ್ಲಿ ಕಲಿಯುತ್ತೇವೆಯೋ ಅವುಗಳನ್ನು ಪ್ರಾಯೋಗಿಕವಾಗಿ ನೋಡಿದಾಗ ನಮಗೆ ಉಂಟಾಗುವ ಅನುಭವಗಳು ಮನಸ್ಸಿನ ಆಳ ಪದರಗಳಲ್ಲಿ ಬೇರೂರುತ್ತವೆ.

ಈ ಹಿಂದೆ ಮನೆಯಲ್ಲಿ ರೇಡಿಯೋ ಸರಿಯಾಗಿ ಕೆಲಸ ನಿರ್ವಹಿಸದೇ ಇದ್ದಾಗ ಅದನ್ನು ಸರಿಯಾಗಿ ಬಿಚ್ಚಿ ಅಲ್ಲಿ ಹೊಕ್ಕಿರಬಹುದಾದ ಸಣ್ಣ ಕ್ರಿಮಿಕೀಟಗಳನ್ನು ಜಿರಲೆಗಳನ್ನು ಜಾಡಿಸಿ ಸ್ವಚ್ಛ ಮಾಡಿ ಎಲ್ಲ ವೈರುಗಳು ಸರಿಯಾಗಿವೆಯೇ ಎಂದು ಪರೀಕ್ಷಿಸಿ ಮತ್ತೆ ಯಥಾ ಪ್ರಕಾರ ಜೋಡಿಸಿ ಇಡುತ್ತಿದ್ದೆವಲ್ಲವೇ?

ಮನೆಯಲ್ಲಿ ಟಿವಿ ನೋಡುವಾಗ ಜೋರಾದ ಗಾಳಿ ಬೀಸಿ ಟಿವಿಯ ಆಂಟಿನಾ ಹೊರಳಿದಾಗ ಅದನ್ನು ಸರಿಯಾದ ದಿಕ್ಕಿನತ್ತ ಹೊರಳಿಸಿ ಟಿವಿಯಲ್ಲಿ ದೃಶ್ಯಗಳು ಮೂಡುತ್ತಿವೆಯೇ ಎಂದು ಖಚಿತಪಡಿಸಿಕೊಳ್ಳಲು ಪರೀಕ್ಷಿಸುತ್ತಿದ್ದುದು ನಿನ್ನೆ ಮೊನ್ನೆ ನಡೆದಂತಿದೆ.

ಆದರೆ ಇಂದಿನ ನಮ್ಮ ಮಕ್ಕಳಿಗೆ ಈ ರೀತಿಯ ಪ್ರಾಯೋಗಿಕ ಪಾಠಗಳು ನಡೆಯುತ್ತಿದೆಯೇ ಎಂದು ಕೇಳಿದರೆ ಇಲ್ಲ ಎಂದು ಹೇಳಬೇಕಾಗಿರುವುದು ವಿಪರ್ಯಾಸವಲ್ಲದೇ ಮತ್ತೇನು? ಕ್ವಾಣಿ ಕೂಸು ಕೊಳೀತು.. ಓಣಿ ಕೂಸು ಬೆಳೀತು ಎಂದು ನಮ್ಮ ಹಿರಿಯರು ಹೇಳಿರುವುದು ಇದಕ್ಕೆ.

ಅದೆಷ್ಟೇ ಜಾಣ್ಮೆ ಇದ್ದರೂ ಕೆಲವು ವಿಷಯಗಳು ನಮ್ಮ ನಿಲುಕಿಗೆ ದೊರೆಯದೆ ಹೋಗುತ್ತವೆ. ಎಲ್ಲ ಮಾತನಾಡುವವರು ಭಾಷಣಕಾರರಾಗುವುದಿಲ್ಲ, ಗುನುಗುನಿಸುವ ಎಲ್ಲರೂ ಸಂಗೀತಗಾರರಾಗುವುದಿಲ್ಲ ನಿಜ ಆದರೆ ಅದರ ಅನುಭವವೇ ಇಲ್ಲದೆ ಹೋದರೆ?

ಅಂತಹ ತಪ್ಪಿಗೆ ಮಕ್ಕಳ ಬದುಕಿನಲ್ಲಿ ಅವಕಾಶವೀಯಬಾರದು.

ಬೀದಿ ಬೀದಿಗಳಲ್ಲಿ ಕೂಡಿಸುವ ಗಣೇಶನ ಪೆಂಡಾಲುಗಳಲ್ಲಿ, ನವರಾತ್ರಿಯ ಸಮಯದಲ್ಲಿ ನಡೆಯುವ ಸಾಂಸ್ಕೃತಿಕ ಕಲೆಗಳ ಉತ್ಸವದಲ್ಲಿ ಮಕ್ಕಳು ಭಾಗವಹಿಸಬೇಕು ಚಿತ್ರಕಲೆ, ಸಂಗೀತ, ನೃತ್ಯ, ಭಾಷಣ ಹೀಗೆ ಎಲ್ಲ ವಿಷಯಗಳಲ್ಲಿಯೂ ಮಕ್ಕಳು ಪ್ರಾವೀಣ್ಯತೆಯನ್ನು ಸಾಧಿಸಲು ಅನುವು ಮಾಡಿಕೊಡಬೇಕು. ಮಕ್ಕಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುಂಚೂಣಿಯಲ್ಲಿ ನಿಲ್ಲಲು ಅವಶ್ಯಕವಾದ ಜ್ಞಾನವನ್ನು ಅವರಿಗೆ ಚಿಕ್ಕಂದಿನಿಂದಲೇ ನೀಡಬೇಕು.

ಅಮೆರಿಕಾದ ಖ್ಯಾತ ಚಿಂತಕ ಎಮರ್ಸನ್ ಹೇಳುವ ಈ ಮಾತು ಅತ್ಯಂತ ಮಾರ್ಮಿಕವಾಗಿದೆ 'ಎದೆಗಾರಿಕೆಯ ಕಿಂಚಿತ ಅಭಾವದಿಂದ ಜಗತ್ತಿನ ಎಷ್ಟೋ ಕುಶಲರು ಮೂಲೆಗುಂಪಾಗಿದ್ದಾರೆ' ಎಂದು. ಮಕ್ಕಳು 'ದೇಶವನ್ನು ಸುತ್ತಿ ಕೋಶವನ್ನು ಓದಬೇಕು' ಎಂಬಂತೆ ಎಲ್ಲ ವಿಷಯಗಳಿಂದ ಪರಿಚಿತರಾಗಬೇಕು. ಕೇವಲ ಧಾರ್ಮಿಕ ಕ್ಷೇತ್ರಗಳು, ಮೋಜಿನ ತಾಣಗಳನ್ನು ಮಾತ್ರವಲ್ಲದೆ ನಮ್ಮ ಹತ್ತಿರದ ಕವಿ, ಸಾಹಿತಿಗಳ ಮನೆಗಳು, ಸ್ಮಾರಕ ಭವನಗಳು, ವಿಜ್ಞಾನ ಮತ್ತು ಸಾಂಸ್ಕೃತಿಕ ಕೇಂದ್ರಗಳಿಗೆ ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳಿಗೆ, ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಬೇಕು. ಅಲ್ಲಿರುವ ವೈವಿಧ್ಯಮಯ ವಿಷಯಗಳು ಕುರಿತು ಅರಿವನ್ನು ಪಡೆಯಬೇಕು.

ನಾವು ಓದುತ್ತಿರುವುದು ಕೇವಲ ಪುಸ್ತಕಗಳಲ್ಲಿ ಮಾತ್ರ ಇಲ್ಲ.. ಪ್ರಪಂಚದೆಲ್ಲೆಡೆ ಇದೆ ಎಂಬ ಜ್ಞಾನ ಮಕ್ಕಳಲ್ಲಿ ಇರಲೇಬೇಕು.

ಅಡುಗೆ ಮಾಡುವುದು, ಬಟ್ಟೆ ಒಗೆಯುವುದು, ಕಸ ಗುಡಿಸುವುದು ಲಿಂಗ ಆಧಾರಿತ ಕೆಲಸಗಳಲ್ಲ. ವೈಯುಕ್ತಿಕ ಸ್ವಾವಲಂಬನೆಯನ್ನು ಸಾಧಿಸಲು ಅತ್ಯವಶ್ಯಕವಾಗಿ ನಾವು ಅಳವಡಿಸಿಕೊಳ್ಳಬಹುದಾದ ಕೆಲಸಗಳು. ಬೇರೆಯವರ ಮೇಲೆ ಅವಲಂಬಿಸದೆ ನಮ್ಮ ಕೆಲಸಗಳನ್ನು ಖುದ್ದು ನಾವೇ ಮಾಡಿಕೊಳ್ಳುವ ಮೂಲಕ ಸ್ವಾವಲಂಬನೆಯನ್ನು



ಸಾಧಿಸಲು ಮಕ್ಕಳಿಗೆ ಅನುವು ಮಾಡಿಕೊಡಬೇಕು. ಪ್ರಾರಂಭದಲ್ಲಿ ಮಕ್ಕಳು ಹೇಗೆ ಮಾಡಿದರೂ ಕೂಡ ಅದನ್ನು ನಯವಾಗಿ ತಿದ್ದಿ ಹೇಳಬೇಕೇ ಹೊರತು ಒರಟಾಗಿ ಖಂಡಿಸಬಾರದು. ಪ್ರತಿ ಬಾರಿಯೂ ಮಗುವನ್ನು ಹೀಗಳೆಯುವುದರಿಂದ ಮಗು ಹಿಂಜರಿಯಲಾರಂಭಿಸುತ್ತದೆ, ಆಸಕ್ತಿಯನ್ನು ಕಳೆದುಕೊಳ್ಳುತ್ತದೆ. ತುಸು ಮಟ್ಟಿನ ಪ್ರೋತ್ಸಾಹ ಮಗುವಿನ ಕಲಿಕೆಯಲ್ಲಿ ಬಹಳಷ್ಟು ಉತ್ತಮ ಪರಿಣಾಮಗಳನ್ನು ಬೀರುತ್ತದೆ.

ಸಾಮಾಜಿಕ ಮೌಲ್ಯಗಳು ಮತ್ತು ಜೀವನ ಕೌಶಲ್ಯಗಳನ್ನು ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಕಲಿಸಬೇಕು. ತಮ್ಮ ಕೆಲಸಗಳನ್ನು ಮಕ್ಕಳು ತಾವೇ ನಿರ್ವಹಿಸಲಾರಂಭಿಸಿದಾಗ ಅವರಿಗೆ ಶ್ರಮದ ಪರಿಕಲ್ಪನೆಯ ಅರಿವು ಮೂಡುತ್ತದೆ. ಇದು ಅವರಲ್ಲಿ ಅಹಂಕಾರ ರಹಿತ ಜೀವನವನ್ನು ಸಾಗಿಸಲು ಅವಕಾಶ ಮಾಡಿಕೊಡುತ್ತದೆ.



ಪಾಟೀಲ್ ಪುಟ್ಟಪ್ಪನವರು ಪತ್ರಕರ್ತನಾಗಲು ಪತ್ರಿಕೋದ್ಯಮ ಪದವಿ ಪಡೆದಿದ್ದರೆ ಮಾತ್ರ ಸಾಲದು ಪತ್ರಿಕೋದ್ಯಮದ ಎಲ್ಲಾ ಗಹನ ವಿಷಯಗಳನ್ನು ಅರಿತಿರಬೇಕು, ಕಾರ್ಯಶೀಲತೆ ಅವರದಾಗಿರಬೇಕು ಎಂದು ಹೇಳುತ್ತಿದ್ದರು.

ಮನೆಯಲ್ಲಿ ಮೂರು ತಲೆಮಾರಿನ ಜನರು ಇದ್ದಾಗ ನಮಗಿಂತ ಹಿರಿಯರನ್ನು ಮತ್ತು ನಮಗಿಂತ ಕಿರಿಯರನ್ನು ನಾವು ಗೌರವಿಸಲೇಬೇಕು. ನಮಗಿಂತ ಹಿರಿಯರನ್ನು ಗೌರವಿಸುವ ಮೂಲಕ ನಮಗಿಂತ ಕಿರಿಯರಿಗೆ ನಾವು ಗೌರವದ, ಪ್ರೀತಿಯ, ವಿಶ್ವಾಸದ ಪಾಠವನ್ನು ಪಠ್ಯೇತರ ಚಟುವಟಿಕೆಯ ರೂಪದಲ್ಲಿ ಕಲಿಸಲೇಬೇಕು. ನಾವು ನಮ್ಮ ಹಿರಿಯರ ಕುರಿತು ತೋರಿಸುವ ಅಸಡ್ಡೆಗಳು ನಮ್ಮ ಮಕ್ಕಳಿಗೆ ಪಾಠವಾದರೆ ಅವರು ಕೂಡ ಅದನ್ನೇ ನಮ್ಮ ವಿಷಯದಲ್ಲಿ ರೂಢಿಸಿಕೊಳ್ಳುತ್ತಾರೆ ಎಂಬ ಸೂಕ್ಷ್ಮತೆಯ ಅರಿವು ನಮಗಿರಬೇಕು.

ಶಾಲೆಯ ಪಾಠಗಳನ್ನು ಹೇಗೆ ಬೇಕಾದರೂ, ಯಾರು ಬೇಕಾದರೂ ಕಲಿಯಬಹುದು.. ಆದರೆ ಮೌಲ್ಯಯುತ ಬದುಕಿನ ಪಾಠ ಕಲಿತವರು ಬದುಕಿನ ಎಂತಹದ್ದೇ ಸವಾಲುಗಳನ್ನು ಸುಲಲಿತವಾಗಿ ಎದುರಿಸಬಲ್ಲರು.

■ ಲೇಖನ
**ವೀಣಾ ಹೇಮಂತ್ ಗೌಡ ಪಾಟೀಲ್,**
**ಮುಂಡರಗಿ**
**ಗದಗ ಜಿಲ್ಲೆ**



# ಮುಳಸಾವಳಗಿ ಗ್ರಾಪಂ ಪಿಡಿಓ ಮೇಲೆ ಕ್ರಮಕ್ಕೆ ಆಗ್ರಹಿಸಿ ಮನವಿ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ : ಮುಳಸಾವಳಗಿ ಗ್ರಾಮ ಪಂಚಾಯಿತಿ ಪಿಡಿಓ ಅವರು ಪಂಚಾಯಿತಿಯಲ್ಲಿ ಜಾತಿ ತಾರತಮ್ಯ ಮಾಡುವುದರ ಜೊತೆಗೆ ಬೋಗಸ್ ಬಿಲ್ ಮೂಲಕ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿ ಹಾಗೂ ಕ್ರಮಕ್ಕೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ತಾಲ್ಲೂಕು ಪಂಚಾಯಿತಿ ಇಓ ಭಾರತಿ ಚೆಲುವಯ್ಯ ಅವರಿಗೆ ಮನವಿ ಸಲ್ಲಿಸಿದರು.



ಪಟ್ಟಣದ ತಾಲ್ಲೂಕು ಪಂಚಾಯಿತಿ ಗುರುವಾರ ಆಗಮಿಸಿದ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಪಿಡಿಓ ಅವರ ಬಗ್ಗೆ ಆರೋಪಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕು ಸಂಚಾಲಕ ರಾಜಕುಮಾರ ಸಿಂದಗೇರಿ ಮಾತನಾಡಿ, ಗ್ರಾಮದ ಪಿಡಿಓ ಜಿ.ಸಿ.ಕನ್ನೊಳ್ಳಿ ಇವರು ಪಂಚಾಯಿತಿ ಸದಸ್ಯರ ಮಧ್ಯೆ ಜಾತಿ ತಾರತಮ್ಯ ಮಾಡುವುದರ ಜೊತೆಗೆ ಮೇಲ್ವರ್ಗದ ಸದಸ್ಯರ ಬಿಲ್ ಮಾತ್ರ ಪಾವತಿ ಮಾಡುತ್ತಾರೆ. ಅಲ್ಲದೆ ಎನ್‌ಆರ್‌ಇಜಿ ಯೋಜನೆಯಲ್ಲಿ ಎನ್‌ಎಮ್‌ಆರ್ ಹಾಕಿದ ಬಿಲ್‌ಗಳಿಗೆ ಪೇಮೆಂಟ್ ಮಾಡದೇ ವಿನಾಕಾರಣ ಕಿರುಕುಳು ನೀಡುತ್ತಿದ್ದಾರೆ. ಅಲ್ಲದೆ ಎಸ್‌ಸಿ, ಎಸ್‌ಟಿ ಸಮುದಾಯದ ಸದಸ್ಯರೊಂದಿಗೆ ಅಸಭ್ಯವಾಗಿ ವರ್ತಿಸಿ ಕೀಳಾಗಿ ಕಾಣುತ್ತಾರೆ ಎಂದು ಆರೋಪಿಸಿ ಆಕ್ರೋಶ ವ್ಯಕ್ತಪಡಿಸಿದರು.

ಪಿಡಿಓ ಅವರ ಮೇಲೆ 2023 ರಿಂದ 2026 ವರೆಗಿನ ಬಿಲ್‌ಗಳಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಅಧಿಕಾರಿಗಳ ತಂಡ ರಚನೆ ಮಾಡಿ, ತನಿಖೆ ಕೈಗೊಂಡು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದಲಿತ ಸಂಘರ್ಷ ಸಮಿತಿಯ ಸಹ ಸಂಚಾಲಕ ಬಸವರಾಜ ಇಂಗಳಗಿ, ಗ್ರಾಮ ಪಂಚಾಯಿತಿ ಸದಸ್ಯರಾದ ದಯಾನಂದ ರಾಠೋಡ, ರಾಜು ರಾಠೋಡ, ಬೀರು ಹಳ್ಳಿ, ಪರಶುರಾಮ ನಾಯ್ಕೋಡಿ, ಪ್ರಕಾಶ ಗುಡಿಮನಿ ಇದ್ದರು.

# ಅಲೆಮಾರಿ ಜನಾಂಗದವರಿಗೆ ಯೋಜನೆ ತಲುಪಿಸಿ : ಡಿಸಿ ಡಾ. ಆನಂದ ಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರಿಗೆ ವಿವಿಧ ಯೋಜನೆಗಳಡಿ ಸರ್ಕಾರದ ಸೌಲಭ್ಯ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ಆನಂದ ಕೆ. ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಕರ್ನಾಟಕ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಗಳ ಹಾಗೂ ಕರ್ನಾಟಕ ಪರಿಶಿಷ್ಟ ಪಂಗಡದ ಮೇದಾರ ಅಲೆಮಾರಿ ಸಮುದಾಯಗಳ ಎರಡನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗುರಿಗಳನುಸಾರ ಈ ಹಿಂದಿನ ಸಭೆಯಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಯೋಜನೆಯ ಲಾಭ ತಲುಪಿಸಬೇಕು. ಬ್ಯಾಂಕಿನಲ್ಲಿ ಈ ಫಲಾನುಭವಿಗಳಿಗೆ ಸಾಲ ಸೌಲಭ್ಯ ಕಲ್ಪಿಸಲು ವೃಥಾ ವಿಳಂಬ ಮಾಡಬಾರದು ಎಂದು ಬ್ಯಾಂಕಿನ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿ ಮೂರು ತಿಂಗಳಿಗೊಮ್ಮೆ ಸಿಇಓ ಅವರ ನೇತೃತ್ವದಲ್ಲಿ ಬ್ಯಾಂಕರ್ಸ ಸಭೆ ನಡೆಸಿ ಅಗತ್ಯ ಸೂಚನೆ ನೀಡಲಾಗುತ್ತಿದೆ. ಇದರಲ್ಲಿ ಸಮಸ್ಯೆ ಇದ್ದರೆ ಸಿಇಓ ಅವರ ಗಮನಕ್ಕೆ ತರಲು ಸಮಿತಿ ಸದಸ್ಯರಿಗೆ ತಿಳಿಸಿದರು.



ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಾಧಿಕಾರಿಗಳಾದ ಸಿಇಓ ರಿಷಿ ಆನಂದ ಮಾತನಾಡಿ, ಕಳೆದ ಬ್ಯಾಂಕರ್ಸ್ ಮೀಟಿಂಗ್ ನಲ್ಲಿ ಈ ಬಗ್ಗೆ ಸೂಚಿಸಿದೆ. ಅರ್ಹರಿಗೆ ಬ್ಯಾಂಕಿನ ಮಾರ್ಗಸೂಚಿಯಂತೆ ಸಾಲ–ಸೌಲಭ್ಯ ನೀಡಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಬ್ಯಾಂಕುಗಳು ವೃಥಾ ವಿಳಂಬ ಮಾಡಬಾರದು ಎಂದು ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು.ಈ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಅವರಿಗೆ ದೊರಕಬೇಕಾದ ಸೌಲಭ್ಯಗಳನ್ನು ತ್ವರಿತವಾಗಿ ತಲುಪಿಸಬೇಕು ಎಂದರು.

2025 ರಿಂದ 26ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ವಿವಿಧ ಯೋಜನೆಯಡಿ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳ ಮಾಹಿತಿ ವಿವರವನ್ನು ಸಭೆಗೆ ಮಂಡಿಸಲಾಯಿತು.ಜೊತೆಗೆ ಅವರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕು.

ಮಕ್ಕಳ ಶಿಕ್ಷಣಕ್ಕಾಗಿ ಒತ್ತು ನೀಡುವುದು, ಸಮುದಾಯ ಭವನ ನಿರ್ಮಾಣ, ಬೀದಿ ದೀಪ, ಸ್ಮಶಾನ ಭೂಮಿ, ಈ ಸಮುದಾಯ ವಾಸಿಸುವ ಕಾಲೊನಿಯಲ್ಲಿ ಮೂಲಭೂತ ಸೌಕರ್ಯ ಒದಗಿಸಿ ಅಭಿವೃದ್ಧಿ ಪಡಿಸುವಂತೆ ಸಮಿತಿ ಸದಸ್ಯರು ಸಭೆಗೆ ಕೋರಿದರು.

ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿ ಅವರು ತಹಶೀಲ್ದಾರ ಹಾಗೂ ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೇ ಸದಸ್ಯರು ಈ ಸಭೆಯಲ್ಲಿ ಸಲ್ಲಿಸಿದ ಕುಂದುಕೊರತೆಗಳಿಗೆ ಪ್ರಾಧಾನ್ಯತೆ ನೀಡಿ ಇತ್ಯರ್ಥಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ರಾಮನಗೌಡ ಹಟ್ಟಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದೀನ್ ಸೌದಾಗರ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯದ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸದಸ್ಯರಾದ ಕಾಮಣ್ಣ ದೇವಪ್ಪ ದಶವಂತ, ಬಾಬು ಭೀಮಪ್ಪ ಭಜಂತ್ರಿ, ಲಕ್ಷ್ಮಣ ನಾಗಪ್ಪ ಭಜಂತ್ರಿ, ಭೀಮರಾಯ ಲಕ್ಷ್ಮಣ ಕಟ್ಟಿಮನಿ, ವಾಸುದೇವ ಕಾಳೆ ಹಾಗೂ ಪರಿಶಿಷ್ಟ ಪಂಗಡದ ಮೇದಾರ ಅಲೆಮಾರಿ ಸಮುದಾಯ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸದಸ್ಯರಾದ ವಿಠ್ಠಲ ಎನ್ ಪರಾಂಡೆ, ಫಕೀರಸ್ವಾಮಿ ಗುರುನಾಥ ಸವಣೂರ, ಶ್ರೀಮತಿ ಮಂದಾಬಾಯಿ ಬಸವರಾಜ ಗೊಳಸಂಗಿ, ರಾಘವೇಂದ್ರ ಬುರುಡ ಹಾಗೂ ಉಮೇಶ ಸದಾಶಿವ ಗೊಳಸಂಗಿ ಸೇರಿದಂತೆ ಜಿಲ್ಲಾ ಹಾಗೂ ತಾಲೂಕಾ ಮಟ್ಟದ ಅಧಿಕಾರಿಗಳು ಇದ್ದರು.

# ಪೌರ ಕಾರ್ಮಿಕರಿಗೆ ವೇತನವನ್ನು ಸಕಾಲಕ್ಕೆ ಪಾವತಿಸಿ

## ಸ್ಥಳೀಯ ಸಂಸ್ಥೆ ಮುಖ್ಯಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರ ವೇತನವನ್ನು ನಿಗದಿತ ಅವಧಿಯಲ್ಲಿ ಪಾವತಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮವು 2013 ರನ್ವಯ ಜಿಲ್ಲಾ ಮಟ್ಟದ 2ನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನೇರ ಪಾವತಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೂ ಸಕಾಲದಲ್ಲಿ ವೇತನ ಪಾವತಿ ಮಾಡಬೇಕು ಎಂದರು.

ನೇರ ವೇತನ ಪಾವತಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರಿಗೆ ಇಎ, ಇಪಿಎಫ್ ಒದಗಿಸಬೇಕು ಹಾಗೂ ಪೌರ ಕಾರ್ಮಿಕರ ಆರೋಗ್ಯ ತಪಾಸಣೆಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ತಪ್ಪದೇ ನಡೆಸಬೇಕು ಎಂದು ಜಿಲ್ಲೆಯ ವಿವಿಧ ಪುರಸಭೆ, ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳಿಗೆ ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಿದರು.

ಪ್ರತಿಯೊಬ್ಬ ಪೌರ ಕಾರ್ಮಿಕರಿಗೆ ಪ್ರತ್ಯೇಕ ಹೆಲ್ತ್ ಕಾರ್ಡ್ ಮಾಡಿಸಬೇಕು. ಅವರ ಆರೋಗ್ಯ ತಪಾಸಣೆ ಹಾಗೂ ಔಷಧೋಪಚಾರ ವಿವರ ಇರುವುದರಿಂದ ಅವರ ಆರೋಗ್ಯದ ದೃಷ್ಟಿಯಿಂದ ಅನುಕೂಲವಾಗಿರುತ್ತದೆ. ವೈದ್ಯರ ಬಳಿ ಎಲ್ಲ ಮಾಹಿತಿ ದಾಖಲೆ ಇರುವುದರಿಂದ ಪೌರ ಕಾರ್ಮಿಕರ ಆರೋಗ್ಯ ದೃಷ್ಟಿಯಿಂದ ಇದು ಬಹು ಮುಖ್ಯವಾಗಿದೆ. ಹಾಗಾಗಿ ಅವರ ಆರೋಗ್ಯ ತಪಾಸಣೆ ಕಡ್ಡಾಯವಾಗಿದೆ ಎಂದರು.



ಎಲ್ಲ ಪೌರ ಕಾರ್ಮಿಕರಿಗೆ ಸಮವಸ್ತ್ರ ಹಾಗೂ ಗುರುತಿನ ಚೀಟಿ ಕಡ್ಡಾಯವಾಗಿ ಒದಗಿಸಬೇಕು. ಯಾರಿಗೆ ಇಲ್ಲಿಯವರೆಗೆ ನೀಡಿಲ್ಲ ಅವರಿಗೆ ತಕ್ಷಣ ನೀಡಬೇಕು. ಜೊತೆಗೆ ಸುರಕ್ಷತಾ ಪರಿಕರಗಳಾದ ಹ್ಯಾಂಡ್ ಗ್ಲೌಜ್, ಗನ್ ಬೂಟ್ಸ್ ಹಾಗೂ ಮಾಸ್ಕ ಕಡ್ಡಾಯವಾಗಿ ನೀಡಬೇಕು. ಅವರ ವಿಶ್ರಾಂತಿಗೆ ಮಹಾನಗರ ಪಾಲಿಕೆಯಲ್ಲಿ ಸ್ಥಳಾವಕಾಶ ಕಲ್ಪಿಸಬೇಕು. ಅಲ್ಲಿ ಕುಡಿಯುವ ನೀರು, ಶೌಚಾಲಯ ಇರುವುದು ಕಡ್ಡಾಯವಾಗಿದೆ ಎಂದರು.

ಪೌರ ಕಾರ್ಮಿಕರಿಗೆ ಸರ್ಕಾರದಿಂದ ನೀಡಬೇಕಾಗಿರುವ ಸೌಲಭ್ಯ ಹಾಗೂ ಯೋಜನೆಗಳನ್ನು ಕಡ್ಡಾಯವಾಗಿ ಒದಗಿಸಬೇಕು. ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯ ಪ್ರಗತಿ ವರದಿ ಅವಲೋಕಿಸಿದ ಅವರು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಯಂ ಪೌರ ನೌಕರ 592 ಇದ್ದು ಇದರಲ್ಲಿ 314 ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ವಸತಿ ಸೌಲಭ್ಯ ಒದಗಿಸಿ ಅವರಿಗೆ ನೆರವು ಒದಗಿಸಿದೆ. ವಿಜಯಪುರ ಪಾಲಿಕೆ ವ್ಯಾಪ್ತಿಯಲ್ಲಿ 116 ಮನೆಗಳ ಹಕ್ಕುಪತ್ರ ನೀಡಲಾಗಿದೆ. ಬಿಎಲ್ ಸಿ 198 ಹಾಗೂ ಎಎಚ್‌ಪಿ 116 ಸೇರಿದಂತೆ 314 ಮನೆಗಳು ಅನುಮೋದನೆಗೊಂಡಿದ್ದು, ಬಿಎಲ್‌ಸಿ 150 ಮನೆಗಳು ಮುಕ್ತಾಯವಾಗಿವೆ ಬಾಕಿ ಉಳಿದ ಮನೆಗಳ ಕಾಮಗಾರಿಗೆ ವೇಗದ ಸ್ಪರ್ಶ ನೀಡಿ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದರು.

ಎಂಎಸ್ ಕಾಯ್ದೆ 2013ರ ಸೆಕ್ಸನ್ 13 ಹಾಗೂ 16ರನ್ವಯ ಯಾವುದೇ ಮ್ಯಾನ್ಯುವೆಲ್ ಸ್ಕ್ಯಾವೆಂಜರ್ ಬಳಕೆ ಅಪರಾಧವಾಗಿದೆ. ಹಾಗಾಗಿ ಕಡ್ಡಾಯವಾಗಿ ಯಂತ್ರೋಪಕರಣಗಳನ್ನು ಬಳಕೆ ಮಾಡಬೇಕು. ಈ ವಿಷಯದಲ್ಲಿ ಮುಖ್ಯಾಧಿಕಾರಿಗಳು ಗ್ರಾಪಂ ಅಧಿಕಾರಿಗಳು ನಿಗಾ ವಹಿಸಬೇಕು ಎಂದರು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳ್ಳುವ ಉದ್ಯಮಶೀಲತಾ ಯೋಜನೆ ಅರ್ಹರಿಗೆ ತಲುಪಿಸಬೇಕು. ಸಾಲಸೌಲಭ್ಯಕ್ಕೆ ಸಲ್ಲಿಕೆಯಾಗುವ ಬ್ಯಾಂಕಿನಲ್ಲಿ ಬಾಕಿ ಇರದಂತೆ ನೋಡಿಕೊಂಡು ಬ್ಯಾಂಕಿನವರೊಂದಿಗೆ ಸಂವಹನ ಸಾಧಿಸಬೇಕು. ಸ್ವಾವಲಂಬಿ ಸಾರಥಿ ಯೋಜನೆ, ನೇರ ಸಾಲ ಯೋಜನೆ ಸೇರಿದಂತೆ ನಿಗಮದಿಂದ ಅನುಷ್ಠಾನಗೊಳಿಸುವ ಯೋಜನೆಯು ಯಾವುದೇ ಸಮಸ್ಯೆಯಿಂದ ಬಾಕಿ ಉಳಿಯಬಾರದು. ಸಂಬಂಧಿಸಿದ ಅಧಿಕಾರಿಗಳು ಸಮನ್ವಯ ಸಾಧಿಸಿ ಫಲಾನುಭವಿಗಳಿಗೆ ಯೋಜನೆ ಲಾಭ ತಲುಪಿಸಬೇಕು ಎಂದು ಸಲಹೆ ಮಾಡಿದರು. ಈ ಯೋಜನೆ ಕುರಿತ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದರು.

ಸಫಾಯಿ ಕರ್ಮಚಾರಿ ನಾಮನಿರ್ದೇಶಿತ ಸದಸ್ಯ ಚೆನ್ನು ಕಟ್ಟಿಮನಿ ಮಾತನಾಡಿ, ಪೌರ ಕಾರ್ಮಿಕರಿಗೆ ಸುರಕ್ಷತೆ ದೃಷ್ಟಿಯಿಂದ ಸುರಕ್ಷಾ ಪರಿಕರಗಳನ್ನು ಬಳಕೆಗೆ ಜಾಗೃತಿ ಮೂಡಿಸಬೇಕು. ಅವರಿಗೆ ಆರೋಗ್ಯದ ಬಗ್ಗೆ ಮಾನವೀಯ ಹಿನ್ನೆಲೆಯಲ್ಲಿ ಅವರ ಅನುಪಮ ಸೇವೆಯ ಪ್ರತಿಯಾಗಿ ಅವರಿಗಿರುವ ಸೌಲಭ್ಯ ಒದಗಿಸುವಂತೆ ಸಭೆಗೆ ಕೋರಿದರು.

ಈ ಸಭೆಯಲ್ಲಿ ಜಿಪಂ ಸಿಇಓ ರಿಷಿ ಆನಂದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮನಗೌಡ ಹಟ್ಟಿ, ಜಿಲ್ಲಾ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು, ಸಫಾಯಿ ಕರ್ಮಚಾರಿ ಸಮಿತಿಯ ನಾಮನಿರ್ದೇಶಿತ ಸದಸ್ಯರಾದ ಮಹಾದೇವ ಎಸ್ ಕಾಂಬಳೆ, ದಯಾನಂದ ಗಿರಮಲ್ಲಪ್ಪ ಅಲ್ಲಿಬಾದಿ, ಶ್ರೀಮತಿ ಮಹಾದೇವಿ ಮಳಸಿದ್ಧ ಹಾದಿಮನಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

# ಪುಣ್ಯವಂತರ ನೆಲೆಬೀಡು ಮೈಸೂರು

## ಭಾವರಶ್ಮಿ

■ ಉದಯರಶ್ಮಿ ದಿನಪತ್ರಿಕೆ

ಇದು, ಮೈಸೂರಿಗೆ ವಿಶ್ವವಿಖ್ಯಾತ ಮೈಸೂರು ಎಂಬ ಹೆಸರು ತಂದುಕೊಟ್ಟ ಸಾಂಸ್ಕೃತಿಕ ನಗರ ಮೈಸೂರಿನ ರಾಯಭಾರಿಗಳಾದಂತಹ ಅಂಬಾವಿಲಾಸ ಅರಮನೆಯ ಮೈಸೂರು ಒಡೆಯರ ಸ್ವಾರಸ್ಯಕರ ಕಥೆ ಮತ್ತು ಅವರಿಗೆ ಕೃತಜ್ಞತೆ ಸಲ್ಲಿಸುವ ಪರಿ.

ಜಗತ್ಪಸಿದ್ಧ ಮೈಸೂರು'

ಮೈಸೂರಿನ ವಿಷಯ ಬಂದಾಗ ಕೆಲವು ವಿಶೇಷಣಗಳೂ ಸಹ ಅದರೊಂದಿಗೆ ಸೇರಿಕೊಳ್ಳುತ್ತವೆ. ಅದು ಹೇಗೆ ಮೈಸೂರು ಜಗತ್ತಿನಾದ್ಯಂತ ಇಷ್ಟೊಂದು ಪ್ರಸಿದ್ಧಿ ಪಡೆಯಿತು. ಇದಕ್ಕೆ ಕಾರಣರಾದವರು ಯಾರು? ಕಾರಣವಾದ ಅಂಶಗಳಾವುವು? ಈ ಕುತೂಹಲ ಮೂಡಲೇಬೇಕಲ್ಲ? ಸಾಕ್ಷಿ ಕಣ್ಣ ಮುಂದೆಯೇ ಇದೆ. ಅದೇ 415 ವರ್ಷಗಳ ಹಿಂದಿನಿಂದಲೂ ನಡೆದುಕೊಂಡುಬಂದಿರುವ ಮೈಸೂರು ದಸರಾ. ಅದನ್ನು ಆಚರಿಸಿಕೊಂಡು ಬಂದವರು ಮೈಸೂರಿನ ಒಡೆಯರು ಅಥವಾ ಅರಸರು ಅಥವಾ ದೊರೆಗಳು.

ರಾತ್ರಿಯ ಸೂರ್ಯ ಬಲ್ಬಿನಿಂದ ಬರುವ ಬೆಳಕು, ಮನುಷ್ಯನ ಜೀವಜಲ ನಲ್ಲಿನೀರು ಇವೆಲ್ಲವೂ ಅವರು ಕೊಟ್ಟ ಕೊಡುಗೆ. ಒಂದಲ್ಲಾ ಎರಡಲ್ಲಾ ಕೊಡುಗೆಗಳ ಸಾಲೇ ಇದೆ. ಮೈಸೂರಿನ ಅರಸರ ಇತಿಹಾಸ, ಸಮಾಜದ ಅಭಿವೃದ್ಧಿಗೆ ಅವರುಗಳ ಕೊಡುಗೆ ಎಲ್ಲವೂ ಒಂದು ದಂತಕತೆ.

ಆದರೆ ಅದಕ್ಕೂ ಮುಂಚೆ ವಿಜ್ಞಾನ ಒಪ್ಪಿದರೂ ಒಪ್ಪದಿದ್ದರೂ ಇಂದಿಗೂ ನಮ್ಮೆಲ್ಲರ ಮುಂದೆಯೇ ಇರುವ ಸಾಕ್ಷಿ, ನಮ್ಮ ಮೈಸೂರು ಅರಸರ ಜೀವನಕ್ಕೆ ಸಂಬಂಧಿಸಿದ ಅಲಮೇಲಮ್ಮನ ಕಥೆ. ನಮ್ಮೆಲ್ಲರಿಗು ತಿಳಿದಿರುವುದೆ. ಆದರೆ ಆ ಶಾಪವಷ್ಟೇ ಗೊತ್ತು. ಉಳಿದದ್ದು? ಇಲ್ಲಿದೆ.

ಅದು ಸುಮಾರು ಕ್ರಿ.ಶ.1610ರ ಸಮಯ. ಶ್ರೀರಂಗಪಟ್ಟಣ, ವಿಜಯನಗರದ ಸಾಮಂತ ರಾಜ್ಯವಾಗಿದ್ದಂತಹ ಕಾಲ. ಆ ದೀಪನಗರಿ ಶ್ರೀರಂಗಪಟ್ಟಣವನ್ನು ಆಳುತ್ತಿದ್ದವರೇ ತಿರುಮಲ ರಾಜ. ಅವರಿಗಿದ್ದ ಇಬ್ಬರು ರಾಣಿಯರಲ್ಲಿ ಅಲಮೇಲಮ್ಮ ಎರಡನೆಯವರು. ರಾಜರ ಕಾಯಿಲೆ ಎಂದೇ ಹೆಸರಾಗಿದ್ದ ಸಂಧಿವಾತ, ಒಮ್ಮೆ ರಾಜ ತಿರುಮಲನಿಗೂ ಕಾಣಿಸಿತು. ಕಾಯಿಲೆ ಉಲ್ಬಣಗೊಂಡಾಗ ಜ್ಯೋತಿಷಿಗಳ ಸಲಹೆಯ ಮೇರೆಗೆ, ತಿರುಮಲ ರಾಜ ತನ್ನ ಮೊದಲ ಪತ್ನಿಯೊಂದಿಗೆ ಚಿಕಿತ್ಸೆಗಾಗಿ ತಲಕಾಡಿಗೆ ಹೋದರು. ಶ್ರೀರಂಗಪಟ್ಟಣದ ಜವಾಬ್ದಾರಿ ಉಳಿದ ಎರಡನೇ ರಾಣಿ ಅಲಮೇಲಮ್ಮನ ಹೆಗಲೇರಿತು.

ಶ್ರೀರಂಗಪಟ್ಟಣವನ್ನು ಮೈಸೂರಿನ ತೆಕ್ಕೆಗೆ ತೆಗೆದುಕೊಳ್ಳಲು, ಅರಸ ತಿರುಮಲ ಇಲ್ಲದಿರುವುದನ್ನೇ ಕಾಯುತ್ತಿದ್ದ ಮೈಸೂರಿನ ರಾಜಒಡೆಯರ್ ಶ್ರೀರಂಗಪಟ್ಟಣದ ಮೇಲೆ ದಾಳಿಮಾಡಿ, ಶ್ರೀರಂಗಪಟ್ಟಣವನ್ನು ವಶಕ್ಕೆ ತೆಗೆದುಕೊಂಡರು. ಆ ಸಮಯದಲ್ಲಿ ಶ್ರೀರಂಗನಾಥನ ದೇವಿ ರಂಗನಾಯಕಿಯ ಅಪ್ರತಿಮ ಭಕ್ತೆಯಾಗಿದ್ದರಿಂದ, ಪ್ರತೀ ಶುಕ್ರವಾರ ಮತ್ತು ಮಂಗಳವಾರ ತನಗೆ ಅತ್ಯಂತ ಪ್ರಿಯವಾಗಿದ್ದ ತನ್ನೆಲ್ಲಾ ಒಡವೆಗಳನ್ನು ರಂಗನಾಯಕಿ ದೇವಿಯ ಅಲಂಕಾರಕ್ಕೆ ಕೊಟ್ಟು ಮತ್ತೆ ತಿರುಗಿ ಪಡೆಯುತ್ತಿದ್ದ ರಾಣಿ ಅಲಮೇಲಮ್ಮ ಸಹ ತನ್ನ ಪ್ರಾಣಪ್ರಿಯವಾದ ಒಡವೆಗಳೊಂದಿಗೆ ತಲಕಾಡಿಗೆ ಓಡಿಹೋದಳು.



ಅಲ್ಲಿ ಕಾಯಿಲೆ ಉಲ್ಬಣಗೊಂಡು, ಚಿಕಿತ್ಸೆ ಫಲಕಾರಿಯಾಗದೆ ರಾಜ ತಿರುಮಲ ಅಸುನೀಗಿದರು. ಆಗಿನ ಕಾಲದಲ್ಲಿ ಪತಿಯನ್ನು ಕಳೆದುಕೊಂಡ ವಿದವೆಯರು ಯಾವುದೇ ಒಡವೆಗಳನ್ನು ಹಾಕಿಕೊಂಡು ಅಲಂಕಾರ ಮಾಡಿಕೊಳ್ಳುವ ಹಾಗಿರಲಿಲ್ಲವಾದ್ದರಿಂದ ಮತ್ತು ತಿರುಮಲ ರಾಜನಿಗೆ ಮಕ್ಕಳೂ ಸಹ ಇಲ್ಲವಾದ್ದರಿಂದ ವಾರಕ್ಕೆರಡು ಬಾರಿ ದೇವಿ ರಂಗನಾಯಕಿಯ ಅಲಂಕಾರ ಮಾಡುತ್ತಿದ್ದ ಅಲಮೇಲಮ್ಮನ ಒಡವೆಗಳು ಶಾಶ್ವತವಾಗಿ ದೇವಸ್ಥಾನಕ್ಕೆ ಸಿಕ್ಕಿಬಿಟ್ಟರೆ ಒಳ್ಳೆಯದೇ ಅಲ್ಲವೆ ಎಂಬ ಆಲೋಚನೆ ಶ್ರೀರಂಗಪಟ್ಟಣ ದೇವಸ್ಥಾನದ ಅರ್ಚಕ ವರ್ಗಕ್ಕೆ ಬಂದಿತು. ಅದನ್ನ ಮೈಸೂರಿನ ರಾಜಒಡೆಯರಿಗೆ ಹೇಳಿದಾಗ, ಇದು ಅವರಿಗೂ ಸಹ ಸರಿ ಎನ್ನಿಸಿ, ಅಲಮೇಲಮ್ಮನನ್ನು ವಿನಂತಿಸಿ ಒಡವೆಯನ್ನು ತರುವಂತೆ ಹೇಳಿ ರಾಜಒಡೆಯರ್, ರಾಜಭಟರನ್ನು ತಲಕಾಡಿಗೆ ಕಳುಹಿಸುತ್ತಾರೆ. ಆದರೆ ಅಲಮೇಲಮ್ಮ ತನಗೆ ಅತ್ಯಂತ ಪ್ರಿಯವಾದ ಒಡವೆ ಕೊಡುವುದಕ್ಕೆ ಒಪ್ಪುವುದಿಲ್ಲ.

ಆದ್ದರಿಂದ ಒತ್ತಾಯ ಮಾಡಿ ತರುವಂತೆ ರಾಜಒಡೆಯರ್ ಸೈನಿಕರನ್ನು ಕಳುಹಿಸುತ್ತಾರೆ. ಈವಾಗಲೂ ತನ್ನ ಒಡವೆ ಕೊಡಲು ಒಪ್ಪದ ಅಲಮೇಲಮ್ಮ ಆ ಸೈನಿಕರಿಂದ ತಪ್ಪಿಸಿಕೊಂಡು ತನ್ನ ಒಡವೆಗಳೊಂದಿಗೆ ಓಡಲಾರಂಭಿಸಿದಳು.

ಓಡಿ ಓಡಿ ಮಾಲಂಗಿಯ ಕಾವೇರಿ ನದೀತೀರದಲ್ಲಿ ಸೈನಿಕರಿಂದ ತಪ್ಪಿಸಿಕೊಳ್ಳಲಾರದ ಸ್ಥಿತಿಯಲ್ಲಿ ಸಿಕ್ಕಿಕೊಂಡುಬಿಡುತ್ತಾಳೆ. ಇನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದು ತಿಳಿದಾಗ, ಆದೇ ಕಾವೇರಿ ನದಿಗೆ ಹಾರಿ ಜೀವಬಿಡುತ್ತಾಳೆ. ಹಾಗೆ ಹಾರುವ ಮುನ್ನ "ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ, ಮೈಸೂರು ರಾಜರಿಗೆ ಮಕ್ಕಳಾಗದೆ ಇರಲಿ" ಎಂಬ ಮೂರು ಶಾಪಗಳನ್ನು ಕೊಟ್ಟುಹೋಗುತ್ತಾಳೆ. "ನಾನು ರಂಗನಾಯಕಿಯ ನಿಜವಾದ ಭಕ್ತೆಯೇ ಆಗಿದ್ದರೆ ಮತ್ತು ಪತಿವ್ರತೆಯೇ ಆಗಿದ್ದರೆ ನನ್ನ ಶಾಪಗಳು ಸಹ ನಿಜವಾಗಲಿ" ಎಂದು ಹೇಳೀ ತಾನು ತನ್ನ ಒಡವೆಗಳೊಂದಿಗೆ ಕಾವೇರಿ ನದಿಗೆ ಹಾರುತ್ತಾಳೆ.

ಅಂತೆಯೇ ಅಂದಿನ ಸಮಯದಲ್ಲಿ ಸಂಪದ್ಭರಿತವಾಗಿದ್ದ ತಲಕಾಡು ಮರಳಿನಿಂದ ಆವೃತ್ತವಾಯಿತು. ಸುಮಾರು 30ಕ್ಕೂ ಹೆಚ್ಚು ದೇವಸ್ಥಾನಗಳು ಅಲ್ಲಿ ಮರಳಿನಿಂದ ಮುಚ್ಚಿಹೋಗಿವೆ. ಅಲಮೇಲಮ್ಮ ಹಾರಿದ ಮಾಲಂಗಿಯ ಕಾವೇರಿ ನದಿಯಲ್ಲಿ ದೊಡ್ಡ ದೊಡ್ಡ ಸುಳಿಗಳು ನಿರ್ಮಾಣವಾದವು. ಅದೇ ರೀತಿ ಮೈಸೂರು ರಾಜರಿಗೆ ಮಕ್ಕಳಾಗುತ್ತಿಲ್ಲ. ಆದ್ದರಿಂದ ದತ್ತು ಪಡೆಯಲಾಗುತ್ತಿದೆ. ಹದಿನೇಳನೇ ಶತಮಾನದಿಂದ ಇಲ್ಲಿಯವರೆಗೆ ಏಳುಜನ ರಾಜರು ದತ್ತುಪುತ್ರರೇ ಆಗಿದ್ದಾರೆ. ಮೊದಮೊದಲಿಗೆ ಆ ಶಾಪವನ್ನು ಗಂಭೀರವಾಗಿ ಪರಿಗಣಿಸದಿದ್ದ ಒಡೆಯರು, ಶಾಪ ನಿಜವಾಗುತ್ತಿದೆ ಎಂಬುದನ್ನು ಮನಗಂಡ ನಂತರ ಶಾಪವಿಮೋಚನೆಗಾಗಿ ಅಲಮೇಲಮ್ಮನ ಒಂದು ಬಂಗಾರದ ಮೂರ್ತಿ ಮಾಡಿಸಿ, ಅದಕ್ಕೆ ಪೂಜಿಸಲಾರಂಭಿಸಿದರು. ಇಂದಿಗೂ ಸಹ ಪ್ರತೀ ದಸರಾದಲ್ಲಿ ಅಲಮೇಲಮ್ಮನ ಬಂಗಾರದ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸುವ ಪದ್ಧತಿ ಮುಂದುವರೆದುಕೊಂಡು ಬಂದಿದೆ. ಇದು ಚರಿತ್ರೆ, ನಂತರ ನಡೆದದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ಮತ್ತು ನಾವೆಲ್ಲರೂ ಇಂದಿಗೂ ಅವುಗಳಿಂದ ಪ್ರಯೋಜನ ಪಡೆಯುತ್ತಿರುವ ಸಾಧನೆ.

1805ರಿಂದ ಹೆಚ್ಚುಕಡಿಮೆ 1950ರವರೆಗೆ ಕಣ್ಣಿನ ಆಸ್ಪತ್ರೆ, ವಿದ್ಯುತ್ ಸಂಪರ್ಕ , ಅಣೆಕಟ್ಟೆ, ಭಾರತೀಯ ವಿಜ್ಞಾನ ಸಂಸ್ಥೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೃಷಿ ವಿಶ್ವವಿದ್ಯಾನಿಲಯ, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ, ಯುವರಾಜ ಕಾಲೇಜು, ಮಹಾರಾಣೀ ಮಹಿಳಾ ಕಾಲೇಜು, ಲಲಿತ ಮಹಲ್ ಅರಮನೆ, ಬೆಂಗಳೂರಿನ ವಿಜ್ಞಾನ ಕಾಲೇಜು, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಮೆಡಿಕಲ್ ಕಾಲೇಜು, ಕೃಷ್ಣರಾಜನಗರ ಸ್ಥಾಪನೆ, ನಿಮಾನ್ಸ್ ಆಸ್ಪತ್ರೆ, ಕೃಷ್ಣರಾಜ ಆಸ್ಪತ್ರೆ, ಬೆಂಗಳೂರಿನ ಕೆ ಆರ್ ಮಾರುಕಟ್ಟೆ, ಮಂಡ್ಯ ಸಕ್ಕರೆ ಕಾರ್ಖಾನೆ, ಕೆ ಆರ್ ಮಿಲ್, ಸಂತ ಫಿಲೋಮಿನ ಚರ್ಚ್, ಮೈಸೂರು ಪೇಪರ್ ಮಿಲ್ ಭದ್ರಾವತಿ, ಸಿ ಎಫ್ ಟಿ ಆರ್ ಐ, ದೇವರಾಜ ಮಾರುಕಟ್ಟೆ, ಲ್ಯಾಂಡ್ಸ್‌ಡೌನ್ ಬಿಲ್ಡಿಂಗ್, ಡಿಸಿ ಆಫೀಸ್ ಅಥವಾ ಅಠಾರಾ ಕಚೇರಿ.. ಹೀಗೆ ಲೆಕ್ಕವಿಲ್ಲದಷ್ಟು ವ್ಯವಸ್ಥೆಗಳನ್ನ ಕಟ್ಟಿಕೊಟ್ಟವರು ನಮ್ಮ ಮೈಸೂರಿನ ದೊರೆಗಳು.



ಹಾಗೆಯೆ ಬಾಲ್ಯ ವಿವಾಹ ರದ್ದತಿ, ಮಹಿಳಾ ಶಿಕ್ಷಣಕ್ಕೆ ಒತ್ತು, ಹಿಂದುಳಿದವರ ಸುಧಾರಣೆಗಾಗಿ ಮೀಸಲಾತಿ ಹೀಗೆ ಹಲವಾರು ಸುಧಾರಣೆಗಳನ್ನು ಸಹ ತಂದ ಮಹಾನುಭಾವರು.

ಈ ಎಲ್ಲಾ ಅಭಿವೃದ್ಧಿ ಕಾರ್ಯಗಳ ಜೊತೆಗೆ ಮತ್ತೂ ಇನ್ನಷ್ಟು ನಮಗೆ ತಿಳಿಯದಂತೆ ಲೆಕ್ಕಕ್ಕೆ ಸಿಗದೆ ಮರೆಯಾಗುವ ಅಭಿವೃದ್ಧಿ ಕೆಲಸಗಳು ಅದೆಷ್ಟೊ.

ಇಷ್ಟೆಲ್ಲಾ ಕಾಣಿಕೆ ಕೊಟ್ಟ ಮೈಸೂರಿನ ಒಡೆಯರು ಒಟ್ಟು ಇಪ್ಪತ್ತೈದು ಜನ. ಅವರೆಲ್ಲರೂ ಕೂಡಾ ನುಡಿದಂತೆ ನಡೆದವರು, ನಡೆದಂತೆ ನುಡಿದವರು. ಅವರಲ್ಲಿ 13 ಜನ ದೀಪನಗರಿ ಶ್ರೀರಂಗಪಟ್ಟಣದಲ್ಲಿದ್ದುಕೊಂಡು ಮೈಸೂರಿಗಾಗಿ ಶ್ರಮಿಸಿದವರು.



ನಂತರ ಬಂದ ನಾಲ್ಕು ಜನ ಒಡೆಯರು ಸುಂದರ ನಗರಿ ಮೈಸೂರಿನಲ್ಲಿದ್ದವರು.

1799ರ ಜೂನ್ 30ನೇ ತಾರೀಕಿನಂದು ಐದು ವರ್ಷದ ಒಬ್ಬ ರಾಜ ಆಡಳಿತಕ್ಕೆ ಬಂದರು. ಅಲ್ಲಿಂದ ಇಲ್ಲಿಯವರೆಗೆ ಒಟ್ಟು 4 ಜನ ಪ್ರಮುಖ ರಾಜರು ಮತ್ತು ಇಬ್ಬರು ರಾಜಕುಮಾರರು ಬಂದಿದ್ದಾರೆ.

ಮೈಸೂರು ಸಂಸ್ಥಾನದ ಮೊದಲ ಪ್ರಮುಖ ಮಹಾರಾಜ ಮುಮ್ಮಡಿ ಅಥವಾ ಮೂರನೇ ಕೃಷ್ಣರಾಜ ಒಡೆಯರ್. ನಂತರ ಬಂದವರು ಅವರ ದತ್ತುಪುತ್ರ ಹತ್ತನೇ ಚಾಮರಾಜೇಂದ್ರ ಒಡೆಯರ್. ಅವರ ಧರ್ಮಪತ್ನಿ ಕೆಂಪನಂಜಮ್ಮಣ್ಣಿ. ಅವರಿಗಿದ್ದ ಇಬ್ಬರು ಪುತ್ರರಲ್ಲಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಜ್ಯೇಷ್ಠಪುತ್ರ ಮತ್ತು ಕಂಠೀರವ ನರಸಿಂಹರಾಜ ಒಡೆಯರ್ ಎರಡನೆಯವರು. ಹತ್ತನೇ ಚಾಮರಾಜೇಂದ್ರ ಒಡೆಯರ್ ನಂತರದ ರಾಜ, ನಾಲ್ವಡಿ ಕೃಷ್ಣರಾಜ ಒಡೆಯರ್. ಇವರ ನಂತರ ಬಂದವರು, ಸಹೋದರ ಕಂಠೀರವ ನರಸಿಂಹರಾಜ ಒಡೆಯರ್ ಮಗನಾದ, ಜಯಚಾಮರಾಜೇಂದ್ರ ಒಡೆಯರ್. ಅವರ ಮೊದಲ ರಾಣಿ ಸತ್ಯಪ್ರೇಮ ಕುಮಾರಿ.

ಜಯಚಾಮರಾಜೇಂದ್ರ ಒಡೆಯರ್ ಮತ್ತು ಸತ್ಯಪ್ರೇಮ ಕುಮಾರಿ ಅವರ ಮಗನೇ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್. ಪತ್ನಿ ಪ್ರಮೋದಾದೇವಿ ಒಡೆಯರ್. ಇಬರಿಬ್ಬರ ದತ್ತುಪುತ್ರ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್. ಪತ್ನಿ ತ್ರಿಷಿಕಾ ಕುಮಾರಿ. ಇವರ ಜ್ಯೇಷ್ಠಪುತ್ರ ಆದ್ಯವೀರ್ ನರಸಿಂಹರಾಜ ಒಡೆಯರ್.

(ಮುಮ್ಮಡಿ ಕೃಷ್ಣರಾಜ ಒಡೆಯರ್ – ಹತ್ತನೇ ಚಾಮರಾಜೇಂದ್ರ ಒಡೆಯರ್ – ನಾಲ್ವಡಿ ಕೃಷ್ಣರಾಜ ಒಡೆಯರ್ – ಜಯಚಾಮರಾಜೇಂದ್ರ ಒಡೆಯರ್ – ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ – ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ – ಆದ್ಯವೀರ್ ನರಸಿಂಹರಾಜ ಒಡೆಯರ್..)

ಮೊದಲ 12–13 ರಾಜರ ಆಳ್ವಿಕೆಯವರೆಗೂ ಸತಿಸಹಗಮನ ಪದ್ಧತಿ ಇತ್ತು. ಮೊದಲ ಬಾರಿಗೆ ಕೊಲ್ಕತ್ತಾದಲ್ಲಿ ಸತಿಸಹಗಮನ ಪದ್ಧತಿ ವಿರುದ್ಧ ಹೋರಾಟ ನಡೆದ ಪ್ರಭಾವ ನಂತರ ಮೈಸೂರಿನ ಒಡೆಯರ್ ಮನೆತನದಲ್ಲೂ ಸಹ ಸತಿಸಹಗಮನ ಪದ್ಧತಿಯನ್ನು ನಿಲ್ಲಿಸಲಾಯಿತು.

ಪ್ರಸ್ತುತ ಇರುವ ಅಂಬಾವಿಲಾಸ ಅರಮನೆ 5ನೆಯ ಅರಮನೆ. ಇದಕ್ಕೂ ಮುಂಚೆ ಇದ್ದದ್ದು 95 ವರ್ಷದ ಹಳೆಯ ಮರದ ಅರಮನೆ. ಹಾಗಾದರೆ ಅದೇನಾಯಿತು? ಈ ಅರಮನೆ ಏಕೆ ಬಂತು? ಈ ಕಥೆಯನ್ನು ನೋಡಿಬರುವ.

ಮರದ ಅರಮನೆ

ಮರದ ಅರಮನೆಯಲ್ಲಿದ್ದದ್ದು ಇಂದಿನ ಅರಮನೆಯ ಜಯರಾಮ ಬಲರಾಮ ಗೇಟಿನ ಎದುರಗಡೆ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ನಿಲ್ಲಿಸಲಾಗಿರುವ ಅಮೃತಶಿಲೆಯ ಪ್ರತಿಮೆಯಲ್ಲಿರುವ ರಾಜ ಹತ್ತನೇ ಚಾಮರಾಜೇಂದ್ರ ಒಡೆಯರ್.

ಹತ್ತನೇ ಚಾಮರಾಜೇಂದ್ರ ಒಡೆಯರ್ 1894ರಲ್ಲಿ ಅಖಿಲ ಭಾರತೀಯ ವೈದ್ಯಕೀಯ ಸಮ್ಮೇಳನದ ಉದ್ಘಾಟನೆಗೆಂದು ಕೋಲ್ಕತ್ತಾಗೆ ಹೋಗಿದ್ದಂತಹ ಸಮಯದಲ್ಲಿ. ಉದ್ಘಾಟನೆ ಮಾಡಿದ ರಾತ್ರಿ ಗಂಟಲುಬೇನೆ(ಡಿಫ್ತೀರಿಯಾ) ಬಂದು ನಿಧನರಾದರು. ಕೊಲ್ಕೊತ್ತಾ ನಗರದ ಮುಖ್ಯ ನ್ಯಾಯಾದೀಶ (ಚೀಫ್ ಜಸ್ಟೀಸ್) ಗುರುನಾಥ್ ಬ್ಯಾನರ್ಜಿಯವರು "ನಾವು ಕೋಲ್ಕತ್ತಾದವರು ಮೈಸೂರಿಗಿಂತ ಚೆನ್ನಾಗಿ ಅಂತ್ಯ ಸಂಸ್ಕಾರ ಮಾಡುತ್ತೇವೆ" ಎಂದು ಕೆಂಪನಂಜಮ್ಮಣ್ಣಿಯವರಿಗೆ ಮಾತು ಕೊಟ್ಟು, ಕೋಲ್ಕತ್ತಾದ ಗಂಗಾನದಿಯ ಪಕ್ಕದಲ್ಲಿರುವ ಕಾಳಿಘಾಟ್ ನಲ್ಲಿ ಅವರ ಪಾರ್ಥೀವ ಶರೀರದ ಅಂತ್ಯಸಂಸ್ಕಾರ ಮಾಡಿದರು. ಅವರ ನೆನಪಿಗಾಗಿ ಇಂದಿಗೂ ಸಹ ಪ್ರತೀವರ್ಷ ಆ ದಿನ ಕೋಲ್ಕತ್ತ ನಗರ ಅನ್ನದಾನವನ್ನು ಏರ್ಪಡಿಸುತ್ತಾ ಬಂದಿದೆ.



ಕೆಂಪನಂಜಮ್ಮಣ್ಣಿಯವರ ಅವರ ಜ್ಯೇಷ್ಠ ಪುತ್ರಿ ಜಯಲಕ್ಷ್ಮಮ್ಮಣ್ಣಿಯವರ ಮದುವೆ ಸಂದರ್ಭದಲ್ಲಿ ಐದನೇ ದಿನದ ಶಾಸ್ತ್ರವಾದ ಗುರುಟಣೆ ಉಯ್ಯಾಲೆ ಮಾಡುವ ದಿನ, ಆ ಶಾಸ್ತ್ರಕ್ಕೂ ಮೊದಲೇ, ಅರಮನೆಯ ಸಹಾಯಕಿಯರು (ಅವ್ವಯರು) ಅಡುಗೆ ಮನೆಯಿಂದ ಕಾಯಿಸಿದ ಹಾಲು ಮತ್ತು ಬೆಂಕಿಯನ್ನು ತೆಗೆದುಕೊಂಡು ಹೋಗುವ ಸಮಯದಲ್ಲಿ ಗಾಳಿ ಜೋರಾಗಿ ಬೀಸಿದ್ದರಿಂದ, ಆ ಬೆಂಕಿ ಚಪ್ಪರದ ಮೇಲೆ ಬಿದ್ದು ಅರಮನೆಯುದ್ದಗಲಕ್ಕೂ ಪಸರಿಸಿತು. ಆದಕಾರಣ 1897ರ ಫೆಬ್ರವರಿ 27ನೇ ತಾರೀಖು ಭಾನುವಾರ ಬೆಳಗ್ಗೆ 9 ಗಂಟೆಗೆ, ಆಕಸ್ಮಿಕ ಬೆಂಕಿಯಲ್ಲಿ ಆ ಮರದ ಅರಮನೆ ಸುಟ್ಟುಹೋಯಿತು.

ಅಂದು ಭಾನುವಾರ ಜೊತೆಗೆ ಯಂತ್ರ ಕೆಟ್ಟುಹೋಗಿದ್ದರಿಂದ ನಲ್ಲಿಯಲ್ಲಿ ನೀರು ಬರುತ್ತಿರಲಿಲ್ಲ, ಕೆರೆಯು ಬತ್ತಿಹೋಗಿತ್ತು. ಜನ ಸಾಲಾಗಿ ನಿಂತು ಆ ಕೆರೆಯಲ್ಲಿದ್ದ ಕೆಸರನ್ನೇ ತುಂಬಿಕೊಂಡು ಬಂದು ಅದರಿಂದಲೇ ಬೆಂಕಿ ನಂದಿಸಲು ಪ್ರಯತ್ನಿಸಿದರು. ಇದ್ದಂತಹ ಒಂದೇ ಒಂದು ಅಗ್ನಿಶಾಮಕ ದಳ ಬೆಂಗಳೂರಿನಲ್ಲಿತ್ತು. ಅದು ಮೈಸೂರಿಗೆ ಬರುವುದರೊಳಗಾಗಿ ಅರಮನೆ ಉರಿದುಹೋಗಿತ್ತು.

ಆ ಅರಮನೆ ಧಗಧಗನೆ ಉರಿಯುವಾಗ 12 ವರ್ಷದ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್, ಕಣ್ಣೀರು ಹಾಕುತ್ತಾ ನಿಂತಿದ್ದ ಅರಮನೆಯ ಮುಸ್ಲಿಂ ಸೇವಕ ವೃದ್ಧನಿಗೆ "ಅಳಬೇಡಿ ತಾತ ಇದು ಪ್ರಕೃತಿಸಹಜ. ಇದಕ್ಕಿನ್ನ ಭವ್ಯವಾದ ಅರಮನೆಯನ್ನು ನಾನು ಕಟ್ಟಿಸುತ್ತೇನೆ" ಎಂದು ಸಮಾಧಾನ ಮಾಡಿ, ಅಷ್ಟು ಚಿಕ್ಕ ವಯಸ್ಸಿನಲ್ಲೇ ಪ್ರೌಢಿಮೆ ಮೆರೆಯುತ್ತಾರೆ.

ಅದಾದ ಒಂದು ವಾರದಲ್ಲೆ ಅನಾಹುತಕ್ಕೆ ಕಾರಣವನ್ನು ಕುರಿತು ನೂರು ಪುಟಗಳ ವಿವರಣೆಯನ್ನು ತೆಗೆದುಕೊಂಡ ರಾಣಿ ಕೆಂಪನಂಜಮ್ಮಣ್ಣಿಯವರು, 15 ದಿನಗಳಲ್ಲೇ ಅರಮನೆಯ ನವನಿರ್ಮಾಣಕ್ಕೆ ಯೋಜನೆಗಳನ್ನೂ ರೂಪಿಸಲು ಆರಂಭಿಸಿದರು.

ಆ ಸಮಯದಲ್ಲಿ ಮದುವೆಗೆ ಬಂದಿದ್ದ ಜನರೆಲ್ಲರನ್ನೂ ಜೋಪಾನವಾಗಿ ಬ್ರಹ್ಮಪುರಿ ದ್ವಾರದಿಂದ ಜಗನ್ಮೋಹನ ಅರಮನೆಗೆ ಕಳುಹಿಸಲಾಯಿತು. ಹಾಗಾಗಿ ಯಾರಿಗೂ ಏನೂ ತೊಂದರೆ ಆಗಲಿಲ್ಲ.

ಕಿಳ್ಳೆ ಮೊಹಲ್ಲಾದ ಜನರೆಲ್ಲ ಸೇರಿ ಅರಮನೆಯ ಒಳಗಿದ್ದ ಅಂಬಾರಿ ವಜ್ರ ವೈಡರ್ಯ ಎಲ್ಲವನ್ನೂ ಈಚೆಗೆ ಸಾಗಿಸಿದರು. ಆದರೆ ಇದೆಲ್ಲವನ್ನೂ ಸಾಗಿಸುವಾಗ ಅರಮನೆಯ 4 ನೌಕರರು ಮತ್ತು ಬೆಂಕಿಯನ್ನು ನಂದಿಸಲು ಬಂದ 4 ಜನ ನೌಕರರು ಧಾರುಣವಾಗಿ ಬೆಂಕಿಂಯಲ್ಲಿ ಸುಟ್ಟು ಸತ್ತುಹೋದರು. ಆ 8 ಜನರ ಕುಟುಂಬಕ್ಕೆ ರಾಣಿ ಕೆಂಪನಂಜಮ್ಮಣ್ಣಿಯವರು ಒಂದು ವಾರದೊಳಗೆ ಪುನರ್ವಸತಿ ನಿರ್ಮಿಸಿಕೊಟ್ಟು, ಉದ್ಯೋಗ ಕೊಟ್ಟು ನೋಡಿಕೊಂಡರು.

ಅಂಬಾವಿಲಾಸ ಅರಮನೆ

ಶಿಮ್ಲಾದಲ್ಲಿರುವ ವೈಸ್ ರಾಯ್ ಭವನವನ್ನು ವಿನ್ಯಾಸಗೊಳಿಸಿದ, ಸರ್ ಹೆನ್ರಿ ಇರ್ವಿನ್ ನ್ನು ಕರೆಸಿ ಅರಮನೆಯ ವಿನ್ಯಾಸವನ್ನು ಮಾಡಿಕೊಡುವಂತೆ ಕೇಳಿಕೊಳ್ಳಲಾಯಿತು. 6 ತಿಂಗಳುಗಳ ಕಾಲ ಮೈಸೂರಿನಲ್ಲೇ ಇದ್ದಂತಹ ಇರ್ವಿನ್, (ಇವಾಗಿನ ಮೈಸೂರಿನ ಇರ್ವಿನ್ ರಸ್ತೆ)ಅರಮನೆಯ ವಿನ್ಯಾಸವನ್ನು ಮಾಡಿಕೊಟ್ಟಿದ್ದಕ್ಕಾಗಿ, ಕೆಂಪನಂಜಮ್ಮಣ್ಣಿಯವರು ಅವನಿಗೆ ರೂ.12000 ಸಂಭಾವನೆಯನ್ನು ಕೊಡುತ್ತಾರೆ. ಇವಾಗಿನ ಅಂಬಾವಿಲಾಸ ಅರಮನೆಯನ್ನು ಕಟ್ಟಿದ ಇಂಜಿನಿಯರ್ ಬಿ ಪಿ ರಾಘವಲು ನಾಯ್ಡು. ರಾಣಿ ಕೆಂಪನಂಜಮ್ಮಣ್ಣಿಯವರು, ಬಿ ಪಿ ರಾಘವಲು ನಾಯ್ಡು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಮೂರೂ ಜನರು ಕುಳಿತು ಅರಮನೆಯನ್ನು ಕಟ್ಟುವ ಬಗ್ಗೆ ಚರ್ಚೆಮಾಡಿ ವಿಶ್ವದ ಅತೀ ಶ್ರೇಷ್ಠ ವಸ್ತುಗಳೆಲ್ಲವೂ ಅರಮನೆಯಲ್ಲಿರಬೇಕು, ಶ್ರೇಷ್ಠ ಕೆಲಸಗಾರರು ಅರಮನೆಗಾಗಿ ಕೆಲಸ ಮಾಡಬೇಕು ಎಂಬ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಹಾಗಾಗಿ ಅಮರಶಿಲ್ಪಿ ಜಕ್ಕಣ್ಣಾಚಾರಿಯ ವಂಶಜರನ್ನು ಮತ್ತು ಆಗ್ರಾದಲ್ಲಿ ತಾಜ್ ಮಹಲ್ ನಿರ್ಮಿಸಿದ ಸಂತಾನದವರನ್ನು ಕರೆಸಲಾಗುತ್ತದೆ. 3000 ವರ್ಷಗಳಷ್ಟು ಪ್ರಾಚೀನವಾದ ಭೂಕಂಪನರಹಿತ ಚಾಮುಂಡಿ ಬೆಟ್ಟ ಎಂದು ವಿಜ್ಞಾನಿಗಳು ಹೇಳಿರುವ ಚಾಮುಂಡಿ ಬೆಟ್ಟದಲ್ಲಿದ್ದಂತಹ ಕೆಂಪುಶಿಲೆಗಳನ್ನು ತರಿಸಿ ಶೇಶಾದ್ರಿ ಐಯ್ಯರ್ ವರು ಅರಮನೆಗೆ ಉದ್ದನೆಯ ಕಂಬಗಳನ್ನು ನಿಲ್ಲಿಸಿದರು. 12 ವರ್ಷಗಳ ಕಾಲ ಅಂಬಾವಿಲಾಸ ಅರಮನೆಗೋಸ್ಕರ ಸಾವಿರಾರು ಕೈಗಳು ಕೆಲಸ ಮಾಡಿದವು.

ಎಚ್ ವೈ ಶಾರದಾಪ್ರಸಾದ್ ಅವರ ತಂದೆ ಯೋಗನರಸಿಂಹಂ 1916ರ ಮೈಸೂರು ವಿಶ್ವವಿದ್ಯಾನಿಲಯದ ಮೊದಲ ತಂಡ(ಬ್ಯಾಚ್) ವಿದ್ಯಾರ್ಥಿಯಾದ ಸಂಗಿತ ವಿದ್ವಾನ್ ಅವರ ತಂದೆ ನಾರಾಣಪ್ಪ, ಹೊಳೆನರಸೀಪುರದಿಂದ ಕಾಲುನಡಿಗೆಯಲ್ಲಿ ಬಂದು ಅರಮನೆಯ ಟ್ರೆಷರಿಯಲ್ಲಿ ಅಕೌಂಟ್ಸ್ ವಿಭಾಗದಲ್ಲಿ ಕೆಲಸಕ್ಕೆ ಸೇರಿ ಆರ್ಥಿಕ ಪಾರದರ್ಶಕತೆಯನ್ನು ಮೆರೆದವರು. ಹಾಗಾಗಿಯೆ ಇವಾಗಿರುವ ಅಂಬಾವಿಲಾಸ ಅರಮನೆ ಕಟ್ಟಲು ಖರ್ಚಾದ 49 ಲಕ್ಷದ 63 ಸಾವಿರದ 913 ರೂಪಾಯಿಗಳ ಲೆಕ್ಕವನ್ನು ಕರಾರುವಕ್ಕಾಗಿ ದಾಖಲಿಸಿದ್ದಾರೆ.

ಪ್ರತಿದಿನವೂ ಸಂಜೆ ಅರಮನೆಯ ಲೈಟುಗಳನ್ನು ಆನ್ ಮಾಡುವುದಕ್ಕಾಗಿ ಕಾದು ನೋಡುವಾಗ ಸರಿಯಾಗಿ 7 ಗಂಟೆಗೆ ಝಗಮಗಿಸುವ ಒಂದು ಲಕ್ಷಕ್ಕೂ ಹೆಚ್ಚಿನ ಬಲ್ಬುಗಳು ಸಾಮಾನ್ಯ ಬಲ್ಬುಗಳಲ್ಲ. ಅವು ಸ್ಕ್ರೂ(ತಿರುಪು) ಇರುವ ಬಲ್ಬುಗಳು. ಇವುಗಳನ್ನು ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರ್ ಕರ್ನಲ್ ಬ್ರಿಕ್ಸ್ ಎಂಬ ಮಹಾಶಯ ಹಾಕಿದನು. ಇಂತಹ ಬಲ್ಬುಗಳನ್ನು ಅರಮನೆಯಲ್ಲಿ ಬಿಟ್ಟು ಬೇರೆಲ್ಲೂ ಕಾಣಲು ಸಿಗುವುದಿಲ್ಲ.

ಮೊದಲಿನ ಮರದ ಅರಮನೆಯಲ್ಲಿ ಇದ್ದಂತಹ ಡೈನಮೋ ವಿದ್ಯುತ್ ರೀತಿ, ಮೊದಲಿಗೆ ಈ ಅರಮನೆಗೆ ವಿದ್ಯುತ್ ಬೆಳಕನ್ನು ಕೊಟ್ಟವರು ಶೇಷಾದ್ರಿ ಐಯ್ಯರ್ ರವರು.

ಪ್ರಮೋದಾದೇವಿ ಒಡೆಯರ್ ಮತ್ತು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಈವಾಗ ವಾಸಿಸುತ್ತಿರುವ ಅರಮನೆಯಲ್ಲಿ ಮೊದಲಿನ ಮರದ ಅರಮನೆಯನ್ನು ಕಾಣಬಹುದು

1907ನೇ ಇಸವಿಯಲ್ಲಿ ಗೃಹಪ್ರವೇಶ ಆಗಿ ಪ್ರವಾಸಿಗರಿಗೂ ತೆರೆದಿಡಲಾದ ಅಂಬಾವಿಲಾಸ ಅರಮನೆಯ ಸಂಪೂರ್ಣ ಕಾಮಗಾರಿ 1912ರಲ್ಲಿ ಮುಕ್ತಾಯವಾಯಿತು.

ಮೈಸೂರು ಒಡೆಯರುಗಳ ವಿವರ

ಮೈಸೂರಿನ ಮೊದಲ ಹೆಸರಾಂತ ರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಭಾರತೀಯ ಶಿಕ್ಷಣವನ್ನು ಪಡೆದವರು, ಯುದ್ಧನೀತಿಯಲ್ಲಿ ಪರಿಣಿತಿ ಹೊಂದಿದ ಇವರು ದೀರ್ಘಾಯುಷಿ.

ಅವರ ಮಗ 10ನೇ ಚಾಮರಾಜೇಂದ್ರ ಒಡೆಯರ್ ಬೆಂಗಳೂರು ಅರಮನೆಯಲ್ಲಿ ಓದಿ, ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಮನೆಯ ಮೇಷ್ಟರಾಗಿ ಬರುತ್ತಿದ್ದ ಪ್ರೊ ಮಾಲೆಸನ್ ಎಂಬುವವರಿಂದ ಕಲಿತವರು. ಪ್ರೊ ಮಾಲೆಸನ್ ನಂತರದ ದಿನಗಳಲ್ಲಿ 10ನೇ ಚಾಮರಾಜೇಂದ್ರ ಒಡೆಯರ್ ಗೆ ಪೋಷಕರಾಗಿ, ನಂತರ ಗೆಳೆಯರೂ ಆದವರು.

ಮಹಾರಾಜರನ್ನು ಕಳೆದುಕೊಂಡಂತಹ ಕೆಂಪನಂಜಮ್ಮಣ್ಣಿಯವರು, ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಗೆ ಅತ್ಯುತ್ತಮ ಶಿಕ್ಷಣವನ್ನು ಕೊಡಿಸಬೇಕೆಂಬ ಬಯಕೆಯಲ್ಲಿ, ಇಂದಿಗೂ ಪ್ರೇಜರ್ ಟೌನ್ ಎಂದು ಅವರ ಹೆಸರಿನಲ್ಲಿರುವಷ್ಟು ಪ್ರಸಿದ್ಧಿ ಪಡೆದಿರುವ ಪ್ರೇಜರ್ ಅವರನ್ನು



ಕರೆಸಿದರು. ಅವರು ಆಡಳಿತದ ಪ್ರತಿಯೊಂದು ಅಂಶಗಳನ್ನು ನಾಲ್ವಡಿಯವರನ್ನು ಹೊರಗೆ ಕರೆದುಕೊಂಡುಹೋಗಿ ತೋರಿಸಿ ಹೇಳಿಕೊಟ್ಟರು

ಕರ್ನಲ್ ಎಂಬ ಬಿರುದ್ದು ತೆಗೆದುಕೊಂಡಿದ್ದ, ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾನ್ಯ ಶಾಲೆಯಲ್ಲೇ ಓದಿದವರು. ಆದರೆ ಪ್ರೇಜರ್, ನಾಲ್ವಡಿಯವರಿಗೆ ಆಡಳಿತದ ಬಗ್ಗೆ ವಿವರವಾಗಿ ಹೇಳಿಕೊಟ್ಟರು, 6 ವರ್ಷಗಳ ಕಾಲ ಪ್ರತಿಯೊಂದನ್ನು ಪ್ರಾಯೋಗಿಕವಾಗಿ ಕರೆದುಕೊಂಡು ಹೋಗಿ ತೋರಿಸಿ ಹೇಳಿಕೊಟ್ಟರು. ನ್ಯಾಯಾಲಯದಲ್ಲಿ ಕೂರಿಸಿಕೊಂಡು ಕೋರ್ಟ್ ಕಲಾಪವನ್ನು ತೋರಿಸುತ್ತಿದ್ದರು, ನದಿಗಳ ಹತ್ತಿರ ಕರೆದುಕೊಂಡು ಹೋಗುತ್ತಿದ್ದರು. ವ್ಯವಹರಿಸುವುದನ್ನು ಹೇಳಿಕೊಟ್ಟರು. ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ನಡ, ಸಂಸ್ಕೃತ, ಉರ್ದು, ಹಿಂದಿ & ಇಂಗ್ಲಿಷ್ ಭಾಷೆಗಳನ್ನು ಬಲ್ಲವರಾಗಿದ್ದರು. ಬುದ್ಧ, ಗಯಾ ಕ್ಷೇತ್ರಗಳನ್ನು ನೋಡಿಬಂದವರು. ಜಗತ್ತನ್ನು 2 ಬಾರಿ ಸುತ್ತಿ ಬಂದವರು. ಇಂಗ್ಲೆಂಡ್, ಅಮೇರಿಕಾದಲ್ಲಿದ್ದ ಪ್ರಜಾಪ್ರಭುತ್ವದ ಬಗ್ಗೆ ಖುದ್ದು ನೋಡಿ ತಿಳಿದವರು. ಇಂಗ್ಲೀಷಿನವರಿಗಿಂತ ಇಂಗ್ಲಿಷನ್ನು ಅಚ್ಚುಕಟ್ಟಾಗಿ ಮಾತನಾಡಬಲ್ಲವರಾಗಿದ್ದರು ಎಂಬುದನ್ನು ಇಂಗ್ಲೀಷಿನವರೆ ಬರೆದಿಟ್ಟಿರುವ ದಾಖಲೆಗಳಿವೆ. ವಿದೇಶಿ ಪತ್ರಿಕೆಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಆಧುನಿಕ "ಜನಕ ಮಹಾರಾಜ" ಎಂದು ಕರೆಯಲಾಗಿದೆ.

10ನೇ ಚಾಮರಾಜೇಂದ್ರ ಒಡೆಯರ್ ತಂದೆಗೆ ತಕ್ಕ ಮಗ. ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರನ್ನು 1902ರಿಂದ 1939ರವರೆಗೆ ಆಳಿದ ಮಹಾರಾಜ. ಸರ್ಕಾರದ ದಾಖಲೆಗಳಲ್ಲಿಯೂ ಸಹ ದಾಖಲಿಸಿರುವಂತೆ, ಸತತವಾಗಿ 6 ವರ್ಷಗಳ ಕಾಲ ದಿವಸಕ್ಕೆ 16 ಗಂಟೆ ಓದುತ್ತಿದ್ದ ರಾಜ. ಇವರು ಜ್ಞಾನಬಲದ ಮೇಲೆ ರಾಜರಾದವರು. ಆದ್ದರಿಂದಲೇ ನಾಲೆಡ್ಜ್ ಕಿಂಗ್ ಎಂದು ಕರೆಸಿಕೊಂಡವರು. ಮಹಾಮಹೋಪಾಧ್ಯಾಯ, ಇಂಟರ್ ನ್ಯಾಷನಲಿಷ್ಟ್ ವಿ.ಎಸ್. ಶ್ರೀನಿವಾಸಶಾಸ್ತ್ರಿಯವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನಿಧನವಾದ ರಾತ್ರಿ ಮದ್ರಾಸ್ ಆಕಾಶವಾಣಿಯಲ್ಲಿ ನಾಲ್ವಡಿಯವರನ್ನು ರಾಜಶ್ರೀ(ಸೇಂಟ್ ಕಿಂಗ್) ಅಂದರೆ ಅವರು ರಾಜರೂ ಹೌದು ಋಷಿಯೂ ಹೌದು ಎಂದು ಕರೆದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಕಂಠೀರವ ನರಸಿಂಹರಾಜ ಒಡೆಯರ್ ಜೋಡೆತ್ತುಗಳಿದ್ದ ಹಾಗೆ. 1885ರಲ್ಲಿ ಬಂದಂತಹ ಮೈಸೂರು ಪ್ರಜಾಪ್ರತಿನಿಧಿ ಸಭಾಗೆ ಕಂಠೀರವ ನರಸಿಂಹರಾಜ ಒಡೆಯರ್ ರವರನ್ನು ಎಕ್ಸ್ಟ್ರಾರ್ಡಿನರಿ ಸ್ಪೆಷಲ್ ಮೆಂಬರ್ ಎಂದು ಗೆಜೆಟ್ ನೋಟಿಫಿಕೇಶನ್ ಆಗಿತ್ತು. ಅವರಿಬ್ಬರು ಅಣ್ಣನಿಗೆ ತಕ್ಕ ತಮ್ಮ, ತಮ್ಮನಿಗೆ ತಕ್ಕ ಅಣ್ಣನಂತೆ ಇದ್ದರು.

ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ ಕಂಠೀರವ ನರಸಿಂಹರಾಜ ಒಡೆಯರ್ ಗೆ ಮಗು ಜನಿಸಿದಂತಹ ಸಮಯದಲ್ಲಿ ಇಂಗ್ಲೆಂಡಿಗೆ ಜಯವಾದ್ದರಿಂದ ಅದು ನಮಗೂ ಸಹ ಜಯ ಎಂದು ಭಾವಿಸಿ, ಆ ಮಗುವಿಗೆ ಜಯಚಾಮರಾಜೇಂದ್ರ ಒಡೆಯರ್ ಎಂದು ನಾಮಕರಣ ಮಾಡಲಾಯಿತು. ಇವರು ಮಹಾರಾಜ ಕಾಲೇಜಿನ ಫಿಲಾಸಫಿ ಮತ್ತು ಇತಿಹಾಸದ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ರಾಜ್ಯಶಾಸ್ತ್ರ ವಿದ್ಯಾರ್ಥಿ. ಹಲವಾರು ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿದ್ದಂತಹ ಇವರು ರಾಜಕೀಯದಲ್ಲಿಯೂ ಸಹ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಸತ್ಯಪ್ರೇಮ ಕುಮಾರಿ, ಪ್ರಮೋದಾ ದೇವಿ ಒಡೆಯರ್, ತ್ರಿಷಿಕಾ ಕುಮಾರಿ ದೇವಿ ಈ ಮೂರು ರಾಣಿಯರನ್ನು ಬಿಟ್ಟು ಉಳಿದ ಎಲ್ಲಾ ರಾಣಿಯರ ಹೆಸರು ಅಮ್ಮಣ್ಣಿ–ಯಿಂದಲೇ ಕೊನೆಯಾಗುವುದು ವಿಶೇಷ.

ಅದೃಷ್ಟವಶಾತ್ ಕರ್ನಾಟಕ 1972ರಲ್ಲಿ ರಾಜ್ಯ ಪತ್ರಾಗಾರ ಇಲಾಖೆಯನ್ನು ಪ್ರಾರಂಭಿಸಿತು. 1983ನೇ ಇಸವಿಯಲ್ಲಿ ಮೈಸೂರಿನ ಅರಮನೆಯ ಗಾಯಿತ್ರಿ ದೇವಸ್ಥಾನದ ಒಳಗಿರುವ ಕಟ್ಟಡದಲ್ಲಿ ವಿಭಾಗೀಯ ಪತ್ರಾಗಾರ ಇಲಾಖೆ ಬಂದಿತು. ಅದು ಈವಾಗ ಮೈಸೂರಿನ ಜೆ.ಪಿ.ನಗರದಲ್ಲಿ ಸ್ವಂತ ಕಟ್ಟಡದಲ್ಲಿದೆ. ಅಲ್ಲಿ ಇರಿಗೇಷನ್ ರಿಪೋರ್ಟ್, ಪೊಲೀಸ್ ಮ್ಯಾನ್ಯುಯಲ್, ಬೋರ್ಡ್ ಆಫ್ ರೆವಿನ್ಯು ರೆಕರ್ಡ್ಸ್ , ಸೆನ್ಸೆಸ್ ರಿಪೋರ್ಟ್ ಗಳಂತಹ 200 ವರ್ಷದ ದಾಖಲೆಗಳನ್ನು ಜೋಪಾನವಾಗಿ ಇಡಲಾಗಿದೆ. ಇವಾಗಿನ ಕನ್ನಡ ನಾಡಿನ ಅಧಿಕೃತ ಮುಖವಾಣಿ ಕರ್ನಾಟಕ ರಾಜ್ಯಪತ್ರಕ್ಕೆ ಮೊದಲಿಗೆ 'ಮೈಸೂರಿನ ಗಜೆಟ್' ಎಂದು ಹೆಸರಿತ್ತು, ನಂತರ 'ಗೆಜೆಟ್' ಆಯಿತು.

ಮೈಸೂರಿಗಾಗಿ ಸೇವೆ ಸಲ್ಲಿಸಿರುವ ಸರ್.ಎಂ. ವಿಶ್ವೇಶ್ವರಯ್ಯನಂತಹ ಹಲವಾರು ಅಧಿಕಾರಿಗಳು ಸಹಿ ಮಾಡಿರುವಂತಹ ಒಂದು ಲಕ್ಷ ಕಡತ(ಫೈಲ್)ಗಳನ್ನು ಟ್ರಂಕುಗಳಲ್ಲಿ ತುಂಬಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ಕರ್ನಾಟಕ ಸರ್ಕಾರಕ್ಕೆ ನೀಡಿದ್ದಾರೆ. ಅದೆಲ್ಲವನ್ನೂ ಜೆ ಪಿ ನಗರದ ರಾಜ್ಯ ಪತ್ರಾಗಾರ ಇಲಾಖೆಯಲ್ಲಿ ಜೋಪಾನವಾಗಿ ಇಡಲಾಗಿದೆ.

ಹೀಗೆ ಮೈಸೂರು ಒಡೆಯರು ಜನಸಾಮಾನ್ಯರ ನೋವುಗಳಿಗೆ, ಅವಶ್ಯಕತೆಗಳಿಗೆ ಸ್ಪಂದಿಸಿ, ಆಗಿನ ಕಾಲದಲ್ಲೇ ಮೈಸೂರು, ಜಗತ್ತಿನಾದ್ಯಂತ ಹೆಸರು ಮಾಡುವಂತೆ ಮಾಡಿ, ಮೈಸೂರನ್ನು ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ದವರು. ನಿತ್ಯವೂ ಬೆಳಗೆದ್ದು ಮೊದಲಿಗೆ ನೆನೆಯುವಂತಹ ಸ್ಥಾನದಲ್ಲಿರುವ ಮೈಸೂರು ಒಡೆಯರ ಕಥೆ ಸಾಮಾನ್ಯವಾದದ್ದಂತೂ ಅಲ್ಲವೇ ಅಲ್ಲ ಬದಲಿಗೆ ಕರ್ನಾಟಕದ ಹೆಮ್ಮೆ, ಮೈಸೂರಿಗೆ ಕಣ್ಣಿನ ರೆಪ್ಪೆಯ ರೀತಿಯಲ್ಲಿ ಕಾವಲಾಗಿದ್ದು ರಕ್ಷಣೆಯನ್ನಿತ್ತ ಮಹಾನುಭಾವರುಗಳು ನಮ್ಮ ಮೈಸೂರಿನ ಒಡೆಯರು.

ಲೇಖನ
■ ರಶ್ಮಿ
ಕೆ. ವಿಶ್ವನಾಥ್,
ಮೈಸೂರು



